ANANTHKUMAR PRATISHTHANA

# ಅನಂತಪಥ

ಬದುಕು ಕಲಿಸುವ ವಿಶ್ವಸಂತ
ಶ್ರೀ ಶ್ರೀ ರವಿಶಂಕರ್
ವ್ಯಕ್ತಿ ವಿಶೇಷ ಪುಟ 9



ಸಂಪುಟ - 3 ಮೇ - 2023 ಸಂಚಿಕೆ - 35

## ಮಾನವೀಯ ಸಂವೇದನೆಯ ಅನಂತಚಿತ್ರಗಳು

ಮಳೆಗಾಲದ ಒಂದು ದಿನ. ಇಬ್ಬರು ಹುಡುಗರು ಶಾಲೆಯಿಂದ ಮನೆಯತ್ತ ಹೊರಟಿದ್ದರು. ರಸ್ತೆಯ ಬದಿಯಲ್ಲಿ ಇಳಿವಯಸ್ಸಿನ ಭಿಕಾರಿಯೊಬ್ಬ ಚಳಿಯಲ್ಲಿ ನಡುಗುತ್ತ ಕುಳಿತಿರುವುದನ್ನು ಕಂಡರು. ಆ ಬಾಲಕರಲ್ಲಿ ದೊಡ್ಡವನಿಗೆ ಏನು ತೋಚಿತೋ ಏನೋ, ತನ್ನ ಜೇಬಿಗೆ ಕೈಹಾಕಿ ಹುಡುಕಿದ. ಒಂದೆರಡು ನಾಣ್ಯಗಳು ಸಿಕ್ಕವು. ಅವನ್ನು ಆ ಮುದುಕನಿಗೆ ಕೊಡುವನೆಂದು ಚಿಕ್ಕವನು ನಿರೀಕ್ಷಿಸಿದ್ದ. ಆದರೆ, ಹುಡುಗ ಹಾಗೆ ಮಾಡಲಿಲ್ಲ. ಹತ್ತಿರದ ಅಂಗಡಿಗೆ ಹೋದ. ಕೈಯಲ್ಲಿದ್ದ ಹಣವನ್ನು ಅಂಗಡಿಯವನಿಗೆ ಕೊಟ್ಟು ಒಂದಷ್ಟು ಬೀಡಿಗಳನ್ನು ಕೊಡುವಂತೆ ಕೇಳಿದ. ಸಿಕ್ಕಷ್ಟು ಬೀಡಿಗಳನ್ನು ಆ ಮುದುಕನ ಕೈಯಲ್ಲಿಟ್ಟು ಮುಂದೆ ನಡೆದ.

ಇದನ್ನೆಲ್ಲ ನೋಡುತ್ತಿದ್ದ ಚಿಕ್ಕವನು ಕೇಳಿದ, "ಅಣ್ಣಾ, ಇದ್ಯಾಕೆ ಹೀಗೆ ಮಾಡಿದೆ? ನಾವು ಅಂಗಡಿಯಲ್ಲಿ ಬೀಡಿ ಕೊಳ್ಳುವುದು ಸರಿಯೇ? ಅಪ್ಪ ಅಮ್ಮ ಬೈಯುವುದಿಲ್ಲವೇ?" ತಮ್ಮನ ಪ್ರಶ್ನೆಗಳಿಗೆ ಹಿರಿಯ ಹುಡುಗ ಸಮಾಧಾನದಿಂದಲೇ ಉತ್ತರಿಸಿದ: "ನೋಡು, ಆ ಮುದುಕ ಚಳಿಯಲ್ಲಿ ನಡುಗುತ್ತಿದ್ದಾನೆ. ಅವನಿಗೆ ಕಂಬಳಿ ಕೊಡಿಸುವಷ್ಟು ಹಣ ನಮ್ಮ ಕೈಯಲ್ಲಿಲ್ಲ. ಅದು ಸಾಧ್ಯವೂ ಇಲ್ಲ. ನಮ್ಮ ಹತ್ತಿರ ಇರುವಷ್ಟು ಕಾಸಿನಲ್ಲಿ ಕಡೇ ಪಕ್ಷ ಅವನಿಗೆ ಬೀಡಿ ಕೊಡಿಸಬಹುದು. ಆ ಬೀಡಿ ಸೇದುವುದರಿಂದ ಮುದುಕನ ನಡುಕ ಕಡಿಮೆಯಾಗಬಹುದೋ ಏನೋ. ಅಷ್ಟಾದರೂ ಸಹಾಯಮಾಡಿದಂತೆ ಆಯಿತಲ್ಲ"

ಹೀಗೆ ಬೀಡಿ ಕೊಂಡು ಭಿಕಾರಿಯ ಕೈಗಿತ್ತವನು ಅನಂತಕುಮಾರ್. ಆತನ ಜೊತೆಗಿದ್ದ ತಮ್ಮ ನಂದಕುಮಾರ. ಕಷ್ಟದಲ್ಲಿದ್ದವರಿಗೆ ಕೈಲಾದ ಸಹಾಯಮಾಡಬೇಕೆಂದು ತಾಯಿತಂದೆಯರು ತಮ್ಮ ನಡೆನುಡಿಗಳಲ್ಲಿ ತೋರಿಸಿಕೊಟ್ಟ ಪರಿ ಆ ಮಕ್ಕಳ ಬದುಕಿನುದ್ದಕ್ಕೂ ಸತ್ಪ್ರೇರಣೆ ನೀಡಿದುದರಲ್ಲಿ ಅಚ್ಚರಿಯಿಲ್ಲ. ತಮ್ಮ ಜೀವನದುದ್ದಕ್ಕೂ ಅನಂತಕುಮಾರ್ ತೋರುತ್ತಿದ್ದ ಮಾನವೀಯತೆಯ ಪ್ರತಿಸ್ಪಂದನ ಎಂದೋ ಎಲ್ಲೋ ಕ್ವಚಿತ್ತಾಗಿ





ಸ್ಫುರಿಸುವಂಥದ್ದಾಗಿರಲಿಲ್ಲ. ಕೇಂದ್ರಸಚಿವರಾಗಿಯೋ ಗಣ್ಯವ್ಯಕ್ತಿಯಾಗಿಯೋ ಜನನಾಯಕನಾಗಿಯೋ ಉಳಿದವರೆದುರಿಗೆ ಪ್ರದರ್ಶನ ಮಾಡುವ ತೋರ್ಪಡಿಕೆಯಾಗಿರಲಿಲ್ಲ. ತಮ್ಮ ತಂದೆ ಶ್ರೀ ನಾರಾಯಣಶಾಸ್ತ್ರಿಯವರೂ ತಾಯಿ ಶ್ರೀಮತಿ ಗಿರಿಜಾ ಶಾಸ್ತ್ರಿಯವರೂ ದಿನನಿತ್ಯ ತಮಗೆ ಕಲಿಸಿದ ಬದುಕಿನ ಪಾಠವನ್ನು ಚಾಚೂ ತಪ್ಪದೆ ಪಾಲಿಸಿದ ಅನಂತಕುಮಾರರಿಗೆ ಮಾನವೀಯ ಪ್ರತಿಕ್ರಿಯೆಯೆನ್ನುವುದು ಸಹಜಪ್ರವೃತ್ತಿಯಾಗಿತ್ತು. ಇದರಿಂದಾಗಿ ಅವರು ನಾಯಕತ್ವದ ಸೋಪಾನವೇರಿ ಎಷ್ಟೇ ಉನ್ನತಿಗೇರಿದರೂ ಜನಸಾಮಾನ್ಯರಲ್ಲಿ ಒಬ್ಬನಾಗಿ ಬೆರೆಯಲು ಸುಲಭಸಾಧ್ಯವಾಗಿತ್ತು.

### 'ಚರ್ಚೆ ಬೇಡ'

ಬಡವರ ಹಾಗೂ ದೀನರ ಬಗೆಗಿನ ಅನುಕಂಪವು ಸ್ಥಾಯಿಭಾವವಾಗಿದ್ದು ಅನಂತಕುಮಾರರನ್ನು ಇತರರ ಸಂಕಷ್ಟಕ್ಕೆ ತತ್ಕ್ಷಣ ಪ್ರತಿಸ್ಪಂದಿಸುವಂತೆ ಪ್ರೇರಿಸುತ್ತಿತ್ತು. ವಾಹನದಲ್ಲಿ ಸಂಚರಿಸುವ ವೇಳೆ, ಕಾರು ನಿಂತಲ್ಲಿ ಭಿಕ್ಷುಕರು ಎದುರುಬಂದು ಕೈಚಾಚುವಾಗ ಅನಂತಕುಮಾರ್ ಐದೋ ಹತ್ತೋ ರೂಪಾಯಿ ತೆಗೆದು ಅವರ ಕೈಗಿಡುವರು. ಕಾರಿನಲ್ಲಿದ್ದ ಉಳಿದವರು ಆ ಭಿಕ್ಷುಕರಿಗೆ ಏಕೆ ಪ್ರೋತ್ಸಾಹ ಕೊಡುತ್ತೀರಿ, ಅವರು ಸೋಮಾರಿಗಳಾಗಿ ತಿರುಗುತ್ತಾರೆ ಎಂದೆಲ್ಲ ಹೇಳತೊಡಗುವಾಗ ಅನಂತಕುಮಾರ್ "ಆ ಬಗ್ಗೆ ಚರ್ಚೆ ಬೇಡ" ಎಂದು ಕಟ್ಟುನಿಟ್ಟಾಗಿ ಹೇಳಿ ಅವರ ಮಾತನ್ನು ತಡೆಯುವರು. ಭಿಕ್ಷಾಟನಾ ನಿರ್ಮೂಲನದ ಚರ್ಚೆಯಿಂದ ಯಾಚಕನಿಗೆ ದೊರೆಯಬಹುದಾದ ಪರಿಹಾರವೇನು?

ತಮ್ಮನ್ನು ಕಾಣಬರುವವರು ಬಡವರಿರಲಿ, ಗಣ್ಯರಿರಲಿ ಅನಂತಕುಮಾರರ ವರ್ತನೆ ಏಕರೀತಿಯಾಗಿರುತ್ತಿತ್ತು. ಕೇವಲ ಬನಿಯನ್, ಪಂಚೆ ಧರಿಸಿ ಅವರು ಯಾರ ಎದುರೂ ಕಾಣಿಸಿಕೊಂಡವರೇ ಅಲ್ಲ. ಇತರರ ಬಗೆಗೆ ಅಲಕ್ಷ್ಯ ಅನಾದರವೆಂಬುದು ತಾವು ಧರಿಸುವ ಉಡುಪಿನಲ್ಲೂ ಗೋಚರಿಸುವಂತಿರಬಾರದು. ಪುಟ 6 ರಲ್ಲಿ ಮುಂದುವರೆದಿದೆ

### ಅನಂತಪಥ ಮಾಸಪತ್ರಿಕೆಯ ಬಿಡುಗಡೆ

**ಅನಂತಪಥ ಮಾಸಪತ್ರಿಕೆಯ 34ನೇ ಸಂಚಿಕೆಯನ್ನು ಗವಿಪುರದಲ್ಲಿರುವ ಅದಮ್ಯ ಚೇತನ ಸಂಸ್ಥೆಯಲ್ಲಿ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರೊಡನೆ ಅದಮ್ಯ ಚೇತನದ ಎಲ್ಲ ಕಾರ್ಯಕರ್ತರು ಮತ್ತು ಸಿಬ್ಬಂದಿ ವರ್ಗದವರು ಭಾಗಿಯಾಗಿದ್ದರು.**



# ಉಡುಪಿ ಜಿಲ್ಲೆಯ ಮತ್ತಷ್ಟು ಪುರಾತನಗುಡಿಗಳು

ದೇಗುಲದರ್ಶನ ಮಾಲಿಕೆ - 22






ಅದಮ್ಯ ಚೇತನ ಪ್ರಾಯೋಜಕತ್ವದ ಜನಪ್ರಿಯ ಕಾರ್ಯಕ್ರಮಗಳಲ್ಲಿ ಒಂದಾದ ದೇಗುಲ ದರ್ಶನ ಸರಣಿಯಲ್ಲಿ ಈ ತಿಂಗಳು ಉಡುಪಿ ಜಿಲ್ಲೆಯ ಮತ್ತಷ್ಟು ಪುರಾತನ ದೇವಾಲಯಗಳನ್ನು ಪರಿಚಯಿಸಿಕೊಳ್ಳೋಣ. ಉಡುಪಿಯಿಂದ ಉತ್ತರಕ್ಕೆ ಸಮುದ್ರತೀರದ ಹೆದ್ದಾರಿಯಲ್ಲಿ 30 ಕಿಮೀ ಚಲಿಸಿ ತೆಕ್ಕಟ್ಟೆ ಎಂಬ ಗ್ರಾಮಕ್ಕೆ ಬಂದರೆ ಸುಮಾರು ಒಂದುನೂರು ವರುಷಗಳಷ್ಟು ಹಿಂದಿನ ರಾಘವೇಂದ್ರಮಠವನ್ನು ನೋಡಬಹುದು. ಇಲ್ಲಿ ಆಂಜನೇಯನ ಗುಡಿಯೂ ಭದ್ರಕಾಳಿಯ ಸನ್ನಿಧಾನವೂ ಇವೆ. ಮುಂದೆ ಕೋಟೇಶ್ವರ. ಇಲ್ಲಿ ಮಹತೋಭಾರ ಮಹಾಲಿಂಗೇಶ್ವರ ದೇಗುಲವಿದೆ. ಪಾಂಡ್ಯರ ಕಾಲಕ್ಕೆ ಸೇರಿದ ಈ ದೇಗುಲಕ್ಕೆ ದತ್ತಿನೀಡಿದ ವಿವರಗಳು 13ನೇ ಶತಮಾನದ ಶಾಸನಗಳಲ್ಲೇ ಕಂಡುಬರುತ್ತವೆ. ವಿಶಾಲವಾದ ದೇಗುಲವೂ ಪಕ್ಕದ ಪುಷ್ಕರಿಣಿಯೂ ಮನಸೆಳೆಯುತ್ತವೆ. ಕುಂದಾಪುರದಿಂದ ಮುಂದೆ ಸಾಗಿದರೆ ಮರವಂತೆಯ ಸಮುದ್ರತೀರವನ್ನು ತಲುಪುತ್ತೀರಿ. ಎಡಭಾಗದ ಸಮುದ್ರ, ಬಲಭಾಗದ ನದಿಯ ಹರವು ಆಕರ್ಷಕವಾಗಿ ಕಾಣುತ್ತವೆ. ನದೀತೀರಕ್ಕೆ ಹೊಂದಿಕೊಂಡಂತಿರುವ ವರಾಹಸ್ವಾಮಿ ದೇವಾಲಯವು ಒಂದು ಸಾವಿರ ವರುಷಗಳಿಗೂ ಹಿಂದಿನ ಕ್ಷೇತ್ರ.



ಹೆದ್ದಾರಿಯಲ್ಲೇ ಮುಂದೆ ಏಳು ಕಿಮೀ ದೂರದಲ್ಲಿ ಕಿರಿಮಂಜೇಶ್ವರವೆಂಬ ಪ್ರಾಚೀನ ಕ್ಷೇತ್ರವಿದೆ. ಇಲ್ಲಿನ ಪುರಾತನ ಅಗಸ್ತ್ಯೇಶ್ವರ ದೇವಾಲಯವನ್ನು ಈಚೆಗೆ ಪೂರ್ಣವಾಗಿ ನವೀಕರಿಸಲಾಗಿದೆ. ಇಲ್ಲಿ ಕದಂಬರ ಕಾಲದ ಗಣೇಶನ ಅಪೂರ್ವ ಶಿಲ್ಪವಿದೆ. ಸುಮಾರು 5ನೇ ಶತಮಾನಕ್ಕೆ ಸೇರಿದ ಈ ಗಣೇಶನ ಶಿಲ್ಪವು ಬಾಲಬ್ರಹ್ಮಚಾರಿಯ ರೂಪದಲ್ಲಿ ಕಾಣುವುದು ವಿಶೇಷ. ಮುಂದೆ 12 ಕಿಮೀ ದೂರದಲ್ಲಿ ಬೈಂದೂರು ಸೇನೇಶ್ವರ ದೇಗುಲವಿದೆ. ಸೇನವರ ಅರಸ ಜೀಮೂತವಾಹನನಿಂದ ನಿರ್ಮಿತವಾಯಿತೆನ್ನಲಾದ ಈ ಗುಡಿ 11ನೇ ಶತಮಾನದ್ದು. ಇಲ್ಲಿರುವ ಗಣಪತಿ, ಮಹಿಷಮರ್ದಿನಿ, ಕಾಳಿ, ಸರಸ್ವತಿ ಮತ್ತಿತರ ದೇವತಾವಿಗ್ರಹಗಳು ಚಾಲುಕ್ಯಶೈಲಿಯ ವಿಶಿಷ್ಟಶೈಲಿಯನ್ನು ತೋರುತ್ತವೆ. ಉಡುಪಿ ಜಿಲ್ಲೆಯ ಹಲವು ದೇವಾಲಯಗಳಲ್ಲಿ ಕಾಷ್ಠಶಿಲ್ಪದ ಹಲವು ದೇವತಾಮೂರ್ತಿಗಳಿದ್ದು ನೂರಾರು ವರ್ಷಗಳಿಂದ ಪೂಜಿತವಾಗುತ್ತಿರುವುದು ಗಮನಾರ್ಹ. ಇವುಗಳಲ್ಲಿ ಮಾರನಕಟ್ಟೆಯ ಬ್ರಹ್ಮಲಿಂಗೇಶ್ವರ, ಹಟ್ಟಿಯಂಗಡಿಯ ಮಾರಲಾದೇವಿ ಗುಡಿಯ ದೇವಿಯರ ಶಿಲ್ಪಗಳು ಹಾಗೂ ಮೆಕ್ಕೆಕಟ್ಟು ಗ್ರಾಮದ ನಂದಿಕೇಶ್ವರ ವಿಗ್ರಹಗಳನ್ನು ಹೆಸರಿಸಬಹುದು. ಮೆಕ್ಕೆಕಟ್ಟು ದೇವಾಲಯದ ಒಂದು ವಿಶಾಲವಾದ ಆವರಣದಲ್ಲಿ ಕಾಷ್ಠಶಿಲ್ಪದ ಭವ್ಯಮೂರ್ತಿಗಳನ್ನು ಸಾಲುಸಾಲಾಗಿ ಇರಿಸಿರುವುದೊಂದು ಅಚ್ಚರಿ. ಜನಪದ ದೈವಗಳನ್ನು ಪ್ರತಿನಿಧಿಸುವ ಈ ಮೂರ್ತಿಗಳು ಶಿಲ್ಪಕಲಾನೈಪುಣ್ಯದ ದೃಷ್ಟಿಯಿಂದಲೂ ಗಮನಸೆಳೆಯುತ್ತವೆ.

ಹಟ್ಟಿಯಂಗಡಿಯ ಲೋಕನಾಥೇಶ್ವರ ದೇಗುಲ 7ನೇ ಶತಮಾನದಷ್ಟು ಪುರಾತನವಾದುದು. ಇಲ್ಲಿರುವ ಗಣೇಶನ ಪ್ರಾಚೀನ ಶಿಲ್ಪ ಆಕರ್ಷಕವಾಗಿದೆ. ಇದೇ ಊರಿನಲ್ಲಿರುವ ಸಿದ್ಧಿವಿನಾಯಕ ದೇಗುಲ ಅಸಂಖ್ಯ ಭಕ್ತರನ್ನು ಸೆಳೆಯುವ ಕ್ಷೇತ್ರ. ವಿನಾಯಕ ಮೂರ್ತಿಯು ಕದಂಬರ ಕಾಲ (5ನೇ ಶತಮಾನ)ದಷ್ಟು ಪುರಾತನವಾದುದು. ಇಲ್ಲಿಗೆ ಸಮೀಪದ ಬಸರೂರಿನಲ್ಲಿ ಮಹಾಲಿಂಗೇಶ್ವರ ದೇವಾಲಯವಿದೆ. ಸನಿಹದ ಕಂದಾವರವು ಎಂಟನೇ ಶತಮಾನದಷ್ಟು ಪೂರ್ವದಲ್ಲೇ ಅಗ್ರಹಾರವಾಗಿದ್ದಿತು. ಇಲ್ಲಿ ಸುಬ್ರಹ್ಮಣ್ಯ ಕಾರ್ತಿಕೇಯನ ದೇಗುಲವಿದ್ದು, ಇತ್ತೀಚೆಗೆ ನವೀಕರಿಸಲಾಗಿದೆ.

**ಟಿ.ಎಸ್. ಗೋಪಾಲ್/ ಕೆಂಗೇರಿ ಚಕ್ರಪಾಣಿ**
LINK- http://YouTube.com/AnanthkumarPratishthana





# ಗೆಳೆತನದ ಅಳುಕು

ಅಧ್ಯಾಯ- 11 **ಅನಂತಯಾನ**

ನಿರೂಪಣೆ : ಟಿ.ಎಸ್. ಗೋಪಾಲ್

೧೯೫೭ರ ಕಾಲಕ್ಕೆ ರೈಲ್ವೇ ಇಲಾಖೆಯಿಂದ ಮೈಸೂರು ವಿಭಾಗದ ಕಛೇರಿಯಲ್ಲಿ ಪ್ರಥಮದರ್ಜೆ ಗುಮಾಸ್ತರ ನೇರ ನೇಮಕಾತಿಗಾಗಿ ಅರ್ಜಿ ಕರೆದಿದ್ದರು. ಆಯ್ಕೆಯಾದ ಇಪ್ಪತ್ತೈದು ಜನರ ತಂಡದಲ್ಲಿ ಟಿ.ರಂಗರಾಜನ್ ಅವರೂ ಒಬ್ಬರು. ಹೊಸದಾಗಿ ಸೇರ್ಪಡೆಗೊಂಡವರಿಗೆಲ್ಲ ಈಗಾಗಲೇ ಕಛೇರಿಯಲ್ಲಿ ಇದ್ದ ಅನೇಕ ಹಳಬರನ್ನು ತಾವಾಗಿಯೇ ಮಾತನಾಡಿಸುವುದೆಂದರೆ ಸಹಜವಾಗಿಯೇ ಹಿಂಜರಿಕೆಯಿರುತ್ತದೆ. ಅವರಿಗೆಲ್ಲ ಅನುಭವಸ್ಥ ಸಹೋದ್ಯೋಗಿಗಳನ್ನು ಪರಿಚಯಮಾಡಿಕೊಳ್ಳುವುದಕ್ಕಿಂತ ತಮ್ಮಂತೆಯೇ ಈಚೆಗೆ ನೇಮಕಗೊಂಡ ಹೊಸಬರನ್ನು ಹುಡುಕಿ ಮಾತನಾಡಿಸುವುದರಲ್ಲೇ ಹೆಚ್ಚಿನ ಆಸಕ್ತಿ. ಹೀಗೆ ಹೊಸದಾಗಿ ನೇಮಕಗೊಂಡವರ ಗುಂಪಿನಲ್ಲಿ, ರಂಗರಾಜನ್ ಅವರೂ ಸೇರಿದಂತೆ ಉದ್ಯೋಗಿಗಳೆಲ್ಲರ ಗಮನವನ್ನೂ ತನ್ನೆಡೆಗೆ ಸೆಳೆದುಕೊಂಡ ಮಹನೀಯರೊಬ್ಬರು ತಮ್ಮ ಎತ್ತರದಿಂದಲೂ ಗಾತ್ರದಿಂದಲೂ ಆಕರ್ಷಕವಾಗಿ ಕಂಡರು. ಅವರೇ ನಾರಾಯಣ ಶಾಸ್ತ್ರಿ.




ಶಾಸ್ತ್ರಿಗಳ ಸ್ನೇಹವನ್ನು ಸಂಪಾದಿಸಲು ರಂಗರಾಜನ್ ಕಷ್ಟಪಡಬೇಕಾಗಲಿಲ್ಲ. ಅತ್ಯಂತ ಸ್ನೇಹಪರರಾದ ನಾರಾಯಣ ಶಾಸ್ತ್ರಿಗಳು ಅವರಿಗೆ ಬಹುಕಾಲದ ಆತ್ಮೀಯರಂತೆಯೇ ಕಂಡುಬಂದರು. ತೆಳ್ಳಗಿನ ಶರೀರದ ರಂಗರಾಜರಿಗೆ ಶಾಸ್ತ್ರಿಗಳ ಕಟ್ಟುಮಸ್ತಾದ ಮೈಕಟ್ಟು ಬೆರಗುಮೂಡಿಸಿತ್ತು. ಅವರ ದೈಹಿಕ ಸಾಮರ್ಥ್ಯದ ಬಗೆಗೆ ತಿಳಿದುಕೊಳ್ಳಬೇಕೆಂಬ ಕುತೂಹಲ; ಆದರೆ ಕೇಳಲು ಸಂಕೋಚ. ಅಂತೂ ಒಮ್ಮೆ ಶಾಸ್ತ್ರಿಗಳೊಡನೆ ಮಾತನಾಡುವಾಗ ರಂಗರಾಜನ್ ಹಿಂಜರಿಯುತ್ತಲೇ ಒಂದು ಪ್ರಶ್ನೆ ಕೇಳಬಯಸುವುದಾಗಿ ಹೇಳಿದರು. 'ಕೇಳಿ, ಪರವಾಗಿಲ್ಲ' ಎಂದು ಅನುಮತಿ ದೊರೆತ ಮೇಲೆ ಕೇಳಿದರು: "ನೀವು ಇಷ್ಟೊಂದು ದಷ್ಟಪುಷ್ಟವಾಗಿದ್ದೀರಲ್ಲ, ಅದರ ರಹಸ್ಯವೇನು?"

ಶಾಸ್ತ್ರಿಗಳು ಮುಗುಳುನಗುತ್ತ "ಏನ್ರೀ, ನನ್ನನ್ನು ಏನೆಂದು ಕೊಂಡಿದ್ದೀರಿ ನೀವು, ನಾನು ಸ್ಟೇಟ್ ರೆಸ್ಲರ್ ಗೊತ್ತಾ!" ಎಂದು ಹೆಮ್ಮೆಯಿಂದ ವರ್ಣಿಸಿಕೊಂಡರು. ರಾಜ್ಯ ಮಟ್ಟದ ಕುಸ್ತಿ ಪಟುವಿನ ದೇಹದಾರ್ಢ್ಯವನ್ನು ಪ್ರತ್ಯಕ್ಷವಾಗಿಯೇ ಕಾಣುತ್ತಿರುವಾಗ ಸಂದೇಹ ಪಡಲು ಕಾರಣವೇನೂ ಇರಲಿಲ್ಲ. ರಂಗರಾಜನ್ ಗೆಳೆಯನ ಬಗ್ಗೆ ಮೆಚ್ಚುಗೆ ಸೂಚಿಸುತ್ತ, "ಸಂತೋಷ ಕಣಪ್ಪ. ಆದರೆ ನಿಮ್ಮನ್ನು ನೋಡುವಾಗ, ನಿಮ್ಮ ಜೊತೆ ಮಾತನಾಡುವಾಗ ಸ್ವಲ್ಪ ಹೆದರಿಕೆಯೂ ಆಗುತ್ತೆ" ಎಂದು ಮೆಲ್ಲನೆ ಉಸುರಿದರು! ರೈಲ್ವೆ ಇಲಾಖೆಯು ಆಡಳಿತಾತ್ಮಕ ಕಾರಣಗಳಿಂದ ಹುಬ್ಬಳ್ಳಿ ವಲಯವನ್ನು ಪ್ರಾರಂಭಿಸಿದಾಗ, ಮೈಸೂರು ವಿಭಾಗದಲ್ಲಿ ಹೊಸದಾಗಿ ನೇಮಕಗೊಂಡವರೆಲ್ಲರನ್ನೂ ಹುಬ್ಬಳ್ಳಿಗೆ ವರ್ಗಮಾಡಿತು. ಇದರ ಪರಿಣಾಮವಾಗಿ, ಶಾಸ್ತ್ರಿಯವರಿಗೆ ಕೆಲಸ ಸಿಕ್ಕಿ ಎರಡು ವರ್ಷವಾಗುವುದರೊಳಗೆ ಅವರು ಹುಬ್ಬಳ್ಳಿಗೆ ಹೋಗಬೇಕಾಯಿತು. ಆರೇಳು ತಿಂಗಳ ತರುವಾಯ ರಂಗರಾಜನ್‌ರಿಗೂ ಹುಬ್ಬಳ್ಳಿಗೆ ವರ್ಗವಾಯಿತು. ಹುಬ್ಬಳ್ಳಿಗೆ ಬಂದವರೆ ತಮಗಿಂತ ಮೊದಲು ಅಲ್ಲಿಗೆ ತಲುಪಿದ್ದ ಗೆಳೆಯ ಶಾಸ್ತ್ರಿಯವರನ್ನು ಹುಡುಕಿದರು. ಶಾಸ್ತ್ರಿಯವರಿಗಾಗಲಿ ಅವರಂತೆ ಹುಬ್ಬಳ್ಳಿಗೆ ವರ್ಗವಾಗಿ ಬಂದ ಇತರರಿಗಾಗಲಿ ರೈಲ್ವೆ ಇಲಾಖೆಯು ಕ್ವಾರ್ಟರ್ಸ್ ಸೌಲಭ್ಯವನ್ನೇನೂ ಒದಗಿಸಿರಲಿಲ್ಲ. ಶಾಸ್ತ್ರಿಗಳು ಹಳೇ ಹುಬ್ಬಳ್ಳಿಯಲ್ಲೆಲ್ಲೋ ಮನೆ ಮಾಡಿಕೊಂಡಿದ್ದರು. ಅಲ್ಲಿರುವುದು ಅನಾನುಕೂಲವೆಂದು ತೋರಿದ್ದರಿಂದ ಕೇಶ್ವಾಪುರ ರಸ್ತೆಯ ಸಮೀಪದಲ್ಲಿದ್ದ ವಾಗ್ಮೋರೆ ಚಾಳಿನಲ್ಲಿ ಬಾಡಿಗೆ ಮನೆಯೊಂದರಲ್ಲಿ ವಾಸಿಸುತ್ತಿದ್ದರು. ಅದೇ ಆವರಣದಲ್ಲಿ ಶಾಸ್ತ್ರಿಗಳ ಸಹೋದ್ಯೋಗಿಗಳಾದ ಸೂರ್ಯನಾರಾಯಣ, ಕೃಷ್ಣಮೂರ್ತಿ ಮತ್ತಿತರ ಕೆಲವು ಸ್ನೇಹಿತರು ಇದ್ದರು. ಮುಂದೆ ಎಂ.ಟಿ. ಎಸ್. ಕಾಲೊನಿಗೆ ಬರುವವರೆಗೆ ನಾರಾಯಣ ಶಾಸ್ತ್ರಿಗಳ ಸಂಸಾರ ಅಲ್ಲಿಯೇ ವಾಸವಾಗಿತ್ತು. ಮರಿಯನ್ ತಿಮ್ಮಸಾಗರ ಎಂಬುದರ ಸಂಕ್ಷೇಪ ರೂಪವೇ ಎಂ.ಟಿ.ಎಸ್. ಈ ತಿಮ್ಮಸಾಗರ ಎಂಬುದು ಒಬ್ಬ ಭೂಮಾಲೀಕನ ಹೆಸರು. ಬೆಳಗಾವಿ ರಸ್ತೆಯಲ್ಲಿದ್ದ ಭಾರತ್ ಮಿಲ್ ಕಾರ್ಮಿಕರ ಸೌಕರ್ಯಕ್ಕೆಂದು ಮಿಲ್ ಎದುರಿಗಿದ್ದ ತನ್ನ ಭೂಮಿಯಲ್ಲಿ ತಿಮ್ಮಸಾಗರ ನೂರಕ್ಕೂ ಹೆಚ್ಚು ಮನೆಗಳನ್ನು ಕಟ್ಟಿಸಿದ್ದ. ಆದರೆ ಭಾರತ್ ಮಿಲ್ ಈ ಮನೆಗಳನ್ನು ಕಾರ್ಮಿಕರ ವಸತಿ ಸೌಕರ್ಯಕ್ಕೆ ಬಳಸಿಕೊಳ್ಳಲು ನಿರಾಕರಿಸಿದ್ದರಿಂದ ಮನೆಗಳು ಹಾಗೇ ಉಳಿದಿದ್ದವು. ದೇಶಕ್ಕೆ ಸ್ವಾತಂತ್ರ್ಯ ಬಂದ ಕಾಲಕ್ಕೆ ಭಾರತ್ ಮಿಲ್ ಒಡೆತನ ಹೊಂದಿದ್ದ ಯೂರೋಪಿಯನ್ ವ್ಯಕ್ತಿ ಕಾರ್ಖಾನೆಯ ಒಂದು ಭಾಗಕ್ಕೆ ತಾನೇ ಬೆಂಕಿಕೊಟ್ಟು ಅವಘಡವಾದಂತೆ ತೋರಿಸಿಕೊಟ್ಟು, ವಿಮೆಯ ಹಣ ಕಬಳಿಸಿ ತನ್ನ ದೇಶಕ್ಕೆ ಹೊರಟು ಹೋದ. ಆಮೇಲೆ, ಭಾರತ್ ಮಿಲ್ ಕಾರ್ಮಿಕರ ವಶಕ್ಕೆ ಬಂದರೂ ಹೊಸ ಆಡಳಿತವರ್ಗವು ನೌಕರರಿಗೆ ವಸತಿ ಸೌಕರ್ಯ ಕಲ್ಪಿಸುವಷ್ಟು ಸುಸ್ಥಿತಿಯಲ್ಲಿ ಇರಲಿಲ್ಲ.

ಇದೇ ಸಂದರ್ಭದಲ್ಲಿ ರೈಲ್ವೆ ಇಲಾಖೆಯು ಹುಬ್ಬಳ್ಳಿ ವಲಯವನ್ನು ಹೊಸದಾಗಿ ಪ್ರಾರಂಭಿಸಿತ್ತು. ಹೊಸದಾಗಿ ನೇಮಿಸಿಕೊಳ್ಳುವ ನೌಕರರಿಗಾಗಿ ವಸತಿ ಗೃಹಗಳ ಸಮುಚ್ಚಯದ ಅವಶ್ಯಕತೆಯುಂಟಾಯಿತು. ಎಂ.ಟಿ.ಎಸ್. ಕಾಲೊನಿಯಲ್ಲಿದ್ದ ಮನೆಗಳನ್ನು ತನ್ನ ನೌಕರರ ಕ್ವಾರ್ಟರ್ಸ್ ಆಗಿ ಬಳಸಿಕೊಳ್ಳಲು ರೈಲ್ವೆ ಇಲಾಖೆ ಒಪ್ಪಿಕೊಂಡಿತು. ತಿಮ್ಮಸಾಗರನ ಅದೃಷ್ಟ ಚೆನ್ನಾಗಿತ್ತು. ಅವನು ಯೋಚಿಸಿಕೊಂಡಿದ್ದ ಬೆಲೆಗಿಂತ ಹೆಚ್ಚು ಹಣವನ್ನೇ ರೈಲ್ವೆ ಇಲಾಖೆ ಕೊಟ್ಟು ಇಡೀ ವಸತಿ ಪ್ರದೇಶವನ್ನೇ ಖರೀದಿಸಿತು. ಇದು ಸಕ್ರಮವಾಗಿಲ್ಲವೆಂದು ನ್ಯಾಯಾಲಯದಲ್ಲಿ ಮೊಕದ್ದಮೆಯನ್ನೂ ಹೂಡಿಯಾಗಿತ್ತು. ಬಹು ವರ್ಷಗಳ ಕಾಲ ಎಂ.ಟಿ.ಎಸ್. ಕಾಲೋನಿ ಕೇಸ್ ನಡೆಯಿತು. ಇಲ್ಲಿಂದ ಪದೇ ಪದೇ ಅಧಿಕಾರಿಯೊಬ್ಬರು ಮುಂಬೈಗೆ ಹೋಗಿ ಕೋರ್ಟಿನಲ್ಲಿ ಹಾಜರಾಗುವುದು ನಡೆದಿತ್ತು. ಆದರೆ, ಏನೂ ತೀರ್ಮಾನವಾಗದೇ ಕೇಸ್ ಮುಚ್ಚಿ ಹೋಯಿತಂತೆ. ಎಂ.ಟಿ.ಎಸ್. ಕಾಲೊನಿಯನ್ನು ಕೊಂಡುಕೊಂಡ ಇಲಾಖೆಯು ತನ್ನ ಉದ್ಯೋಗಿಗಳಿಗೆ ಹಿರಿತನದ ಆಧಾರದ ಮೇಲೆ ವಸತಿ ಸೌಕರ್ಯವನ್ನು ಒದಗಿಸಲು ಪ್ರಾರಂಭಿಸಿತು. ಈಚಿನ ವರ್ಷಗಳಲ್ಲಿ ಕೆಲಸಕ್ಕೆ ಸೇರಿದ್ದ ನಾರಾಯಣ ಶಾಸ್ತ್ರಿ, ರಂಗರಾಜನ್ ಮತ್ತಿತರಿಗೆ ಸೇವಾಹಿರಿತನದ ಪಟ್ಟಿಯಲ್ಲಿ ಸ್ಥಾನ ಇರಲಿಲ್ಲ. ಹೀಗಾಗಿ ಅಂಥವರಿಗೆ ಎಂ.ಟಿ. ಎಸ್. ಕಾಲೊನಿಯಲ್ಲಿ ಮನೆ ಸಿಕ್ಕುವುದು ತಡವಾಯಿತು. ಪುಟ 4 ರಲ್ಲಿ ಮುಂದುವರೆದಿದೆ


ಹುಬ್ಬಳ್ಳಿಯ ಎಂ.ಟಿ.ಎಸ್.ಕಾಲೊನಿಯಲ್ಲಿ
ನಾರಾಯಣ ಶಾಸ್ತ್ರಿಯವರ ಕುಟುಂಬ ವಾಸವಾಗಿದ್ದ ಮನೆ

(ಪುಟ 3 ರಿಂದ) ಮನೆ ಸಿಕ್ಕಿದ್ದ ಹಿರಿಯ ಉದ್ಯೋಗಿಗಳಲ್ಲಿ ಕೆಲವರಿಗೆ ಕ್ವಾರ್ಟರ್ಸ್‌ಗೆ ಬರಲು ಇಚ್ಛೆಯಿರಲಿಲ್ಲ. ಅಂಥವರು ತಮಗೆ ದೊರೆತ ಮನೆಯನ್ನು ಕಿರಿಯ ಸಹೋದ್ಯೋಗಿಗಳಲ್ಲಿ ಯಾರು ಬೇಕಾದರೂ ಆಯ್ಕೆ ಮಾಡಿಕೊಂಡು ಹೋಗಿ ವಾಸಿಸಬಹುದೆಂದು ಹೇಳುತ್ತಿದ್ದರು. ಆದರೆ, ಇಂಥ ಅವಕಾಶ ದೊರೆತಾಗಲೆಲ್ಲ ನಾರಾಯಣ ಶಾಸ್ತ್ರಿ ತಮಗೆ ಬೇಡವೆಂದು ನಿರಾಕರಿಸಿಬಿಡುತ್ತಿದ್ದರು. ಇನ್ನೊಬ್ಬರ ಹೆಸರಿನಲ್ಲಿ ಅನುಕೂಲ ಪಡೆದುಕೊಳ್ಳಲು ಶಾಸ್ತ್ರಿಗಳ ಸ್ವಾಭಿಮಾನ ಒಪ್ಪುತ್ತಿರಲಿಲ್ಲ. ''ಇಲಾಖೆಯು ನನ್ನ ಹೆಸರಿಗೆ ಒಂದು ಮನೆಯನ್ನು ಪ್ರತ್ಯೇಕವಾಗಿ ನಿಗದಿಪಡಿಸಿ ಅಲ್ಲಿ ಹೋಗಿರು ಎಂದು ಹೇಳುವವರೆಗೂ ನಾನು ಬೇರೆ ಬಾಡಿಗೆ ಮನೆಯಲ್ಲೇ ಇರುತ್ತೇನೆ. ಯಾರ ಹೆಸರಿಗೋ ನಿಗದಿಯಾದ ಮನೆಯಲ್ಲಿ ಹೋಗಿರುವುದು ನಿಯಮಾನುಸಾರ ಸಮಂಜಸವಲ್ಲ, ನನ್ನ ಮನಸ್ಸಿಗೂ ಒಪ್ಪತಕ್ಕದ್ದಲ್ಲ'' ಎಂದು ಖಡಾಖಂಡಿತವಾಗಿ ನಿರಾಕರಿಸುತ್ತಿದ್ದರು. ಅಂತೂ ೧೯೬೧ರ ವೇಳೆಗೆ ರಂಗರಾಜನ್‌ರಿಗೆ ಎಂ.ಟಿ.ಎಸ್. ಕಾಲೊನಿಯಲ್ಲಿ ಮನೆ ಸಿಕ್ಕ ಸಮಯದಲ್ಲೇ ನಾರಾಯಣ ಶಾಸ್ತ್ರಿಯವರಿಗೂ ಅಲ್ಲಿ ಕ್ವಾರ್ಟರ್ಸ್ ನಿಗದಿಯಾಯಿತು. ಸ್ನೇಹಿತರಿಬ್ಬರೂ ಅಲ್ಲಿ ನೆರೆಹೊರೆಯಲ್ಲಿ ವಾಸಿಸುವಂತಾಯಿತು. ೧೯೫೦ರ ದಶಕದಲ್ಲಿ ಎಂ.ಟಿ. ಎಸ್. ಕಾಲೊನಿ ಹುಬ್ಬಳ್ಳಿಯ ಹೊರಬಡಾವಣೆಯಾಗಿದ್ದುದು ಮಾತ್ರವಲ್ಲ, ತನ್ನದೇ ಆದ ಪ್ರಪಂಚವನ್ನೇ ಸೃಷ್ಟಿಸಿಕೊಂಡಿತ್ತು. ಅಲ್ಲಿದ್ದ ನಿವಾಸಿಗಳೆಲ್ಲ ಬಹುತೇಕ ರೈಲ್ವೆ ಉದ್ಯೋಗಿಗಳು ಮತ್ತವರ ಕುಟುಂಬದವರು. ಹುಬ್ಬಳ್ಳಿ ನಗರ ಮಧ್ಯದ ರೈಲ್ವೆ ನಿಲಾಣ, ಕಚೇರಿಗಳಿಂದ ಕಾಲೊನಿ ಸಾಕಷ್ಟು ದೂರವಾಗಿಯೇ ಇತ್ತು. ಆದರೆ, ಹುಬ್ಬಳ್ಳಿಯ ಇತರೆಡೆಗಳಿಗೆ ಹೋಲಿಸಿದರೆ ಅಲ್ಲಿ ನೀರಿನ ಸೌಕರ್ಯ ಚೆನ್ನಾಗಿತ್ತು. ನೀರು ಸ್ವಲ್ಪ ಕೆಂಪು ಬಣ್ಣ. ವಸತಿಗಿದ್ದವರು ತಂತಮ್ಮ ಮನೆಗಳಲ್ಲಿ ಪಟಿಕದ (ಆಲಂ) ಕಲ್ಲುಗಳನ್ನು ಇಟ್ಟುಕೊಂಡಿದ್ದು ನೀರನ್ನು ತಕ್ಕಮಟ್ಟಿಗೆ ಶುದ್ಧೀಕರಿಸಿಕೊಳ್ಳುವರು. ಅಲ್ಲಿ ವಾಟರ್ ಟ್ಯಾಂಕಿನ ನಿರ್ಮಾಣವಾಗಿದ್ದುದು ನಿವಾಸಿಗಳಿಗೆ ಬಹು ಅನುಕೂಲವಾಗಿತ್ತು. ಆದ್ದರಿಂದಲೇ ರೈಲ್ವೆ ಉದ್ಯೋಗಿಗಳು ದೂರವನ್ನು ಅಲಕ್ಷಿಸಿ ಕಾಲೊನಿಯ ವಾಸವನ್ನು ಆಯ್ಕೆಮಾಡಿಕೊಳ್ಳುತ್ತಿದ್ದರು.

ರಸ್ತೆಗಳು ಡಾಂಬರು ಕಾಣದಿದ್ದ ದಿನಗಳವು. ದೂಳು ತುಂಬಿದ ಮಣ್ಣು ರಸ್ತೆಗಳಲ್ಲಿ ಸಂಚರಿಸಿ ಕಚೇರಿಗೆ ಹೋಗಿ ಬರುವಷ್ಟರಲ್ಲಿ ಬಟ್ಟೆಗಳೂ ಧರಿಸಿಕೊಂಡವರೂ ಗುರುತುಕಾಣದಂತಾದರೂ ಅಚ್ಚರಿಯಿಲ್ಲ. ಎಂಟಿಎಸ್ ನಿವಾಸಿಗಳ ಕೋರಿಕೆಯ ಮೇರೆಗೆ ಕಾಲೊನಿಯಿಂದ ಹುಬ್ಬಳ್ಳಿ ರೈಲ್ವೆ ಕಚೇರಿಯವರೆಗೆ ಬೆಳಗ್ಗೆ ಸಂಜೆ ಸಿಟಿಬಸ್ ವ್ಯವಸ್ಥೆಯಾಯಿತು. ಸಿಟಿಬಸ್ ಓಡಾಟ ಪ್ರಾರಂಭವಾದ ಮೇಲೆ ಕಾಲೊನಿಯವರ ದಿನಚರಿ ಸುಧಾರಿಸಿತೆಂದರೆ ಅತಿಶಯವಲ್ಲ. ಎಂ.ಟಿ.ಎಸ್.ಕಾಲೋನಿಯದೇ ಒಂದು ವಿಶಿಷ್ಟವಾದ ಜಗತ್ತು! ವಸುಧೈವ ಕುಟುಂಬಕಂ ಎಂಬ ಉಕ್ತಿ ಈ ಕಾಲೋನಿಗೆ ಅನ್ವಯಿಸುವ ಮಟ್ಟಿಗೆ ಮತ್ತೆಲ್ಲಿಗೂ ಹೊಂದಲಿಕ್ಕಿಲ್ಲ ಎನ್ನಬಹುದಾದಷ್ಟು ಕಾಲೋನಿಯ ಸದಸ್ಯರಲ್ಲಿ ಸಾಮರಸ್ಯ. ಯಾರ ಮನೆಗೆ ಯಾರು ಯಾವಾಗ ಬೇಕಾದರೂ ಹೋಗಿ ಬರಬಹುದಾದಷ್ಟು, ವಿಶ್ವಾಸ, ಸಲುಗೆ, ಸ್ವಾತಂತ್ರ್ಯ, ದಿನವಿಡೀ ಯಾರ ಮನೆಯ ಬಾಗಿಲೂ ಹಾಕಿರುತ್ತಲೇ ಇರಲಿಲ್ಲ. ಅದರಲ್ಲೂ ಶಾಸ್ತ್ರಿಯವರ ಮನೆಯೆಂದರೆ ಅಕ್ಷರಶ: ಎಲ್ಲರಿಗೂ ಸರ್ವದಾ ತೆರೆದ ಬಾಗಿಲು!

# ನಿಮ್ಮ ಪತ್ರ

ನಮಸ್ಕಾರ, ಅನಂತ ಪಥ ಓದಿದ್ದೇನೆ. (ಕಳೆದೊಂದು ವರ್ಷದಿಂದ ಓದುತ್ತಲೇ ಇದ್ದೇನೆ) ಈ ಸಂಚಿಕೆಯಲ್ಲಿ ನನ್ನ ಕಾರ್ಯಕ್ರಮದ ಫೋಟೋ ಪ್ರಕಟಿಸಿದ್ದೀರಿ...ಧನ್ಯವಾದಗಳು. ಚುನಾವಣೆಯ ಸಂದರ್ಭದಲ್ಲಿ ಪೂರಕವಾದ ವಿಷಯಗಳನ್ನು ಪ್ರಸ್ತಾಪಿಸಿರುವುದು ಪ್ರೇರಣಾದಾಯಿ ಆಗಿದೆ. ಡಾ.ವ್ಯಾಸ ದೇಶಪಾಂಡೆ ನನಗೂ ಸ್ನೇಹಿತರು. ಅವರ ವಿಚಾರಗಳನ್ನು ಓದುವಂತಾಯಿತು. ಇಂತಹದೊಂದು ಶಬ್ದ ಶಿಲ್ಪವನ್ನು ಪ್ರತಿ ತಿಂಗಳು ತರುವುದು ಶ್ರಮದ ಕಾರ್ಯ. ನಿಮ್ಮ ಪರಿಶ್ರಮ ಸಾರ್ಥಕವಾಗಲಿ, ಅದು ಉಳಿದವರಿಗೆ ಮಾರ್ಗದರ್ಶಕವಾಗಲಿ

**- ಶ್ರೀ ದಿವಾಕರ ಹೆಗಡೆ, ಕಾರ್ಯಕ್ರಮ ನಿರ್ವಾಹಕರು, ಆಕಾಶವಾಣಿ, ಮೈಸೂರು**

ಹೆಗ್ಗನಹಳ್ಳಿ ನಾರಾಯಣಶಾಸ್ತ್ರಿ ಅನಂತ್ ಕುಮಾರ್ ರವರ ಅನಂತ ಸಾಧನೆಗಳು ಅನನ್ಯ ವ್ಯಕ್ತಿತ್ವವನ್ನು ಪ್ರತಿತಿಂಗಳು ಅನಾವರಣಗೊಳಿಸುವ ಅನಂತಪಥ ಸಾರ್ಥಕವೆನಿಸುವ ಪ್ರಕಟಣೆಯಾಗಿದೆ. ಈ ಪತ್ರಿಕೆಯು ಅನಂತಕುಮಾರ್ ಅವರ ಸಮಾಜಸೇವೆ ಹಾಗು ರಾಜಕೀಯವನ್ನು ಬಿಂಬಿಸುವ ಬರಹಗಳಲ್ಲದೆ, ಪರಿಸರ, ಶಿಕ್ಷಣ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ವೈವಿಧ್ಯಮಯ ವಿಷಯಗಳನ್ನು ಪ್ರಕಟಿಸುತ್ತಿರುವುದು ಶ್ಲಾಘನೀಯ.

**- ಶ್ರೀ ಕೆಎಸ್ ರಾಮಮೂರ್ತಿ, ಲೇಖಕರು, ಬೆಂಗಳೂರು**

ಅನಂತಪಥದಲ್ಲಿ ನಿಮ್ಮ ಲೇಖನ -ಡಾ||ಎಚ್ ಎಸ್ ಬಗ್ಗೆ, ಓದಿದೆ. ಚಿಕ್ಕ, ಚೊಕ್ಕ ಲೇಖನ - ಇಷ್ಟವಾಯಿತು. ಹೊಸ ಪೀಳಿಗೆಗೆ ಆಗಿಂದಾಗ ಇಂಥ ಸಾಧಕರ ಬಗ್ಗೆ ತಿಳಿಸುತ್ತಿರಬೇಕು. ಎಲ್ಲಿ ಬೀಜಾಂಕುರವಾಗುವುದೋ ಬಲ್ಲವರಾರು? ನಿಮ್ಮ ಈ ಸ್ತುತ್ಯರ್ಹ ಕಾರ್ಯ ಫಲಪ್ರದವಾಗಲಿ ಎಂದು ಹಾರೈಸುತ್ತೇನೆ.

**ಶ್ರೀ ಜಿ ವಿ ಅರುಣ, ಹಿರಿಯ ಸಾಹಿತಿಗಳು**

ತಾಯಿ ಮಗುವಿನ ಹಸಿವನ್ನು ನೀಗಿಸುವ ಹಾಗೆ ನಮ್ಮ ಹಸಿವನ್ನು ನೀಗಿಸಿದ ಅದಮ್ಯ ಚೇತನದ ಡಾ. ತೇಜಸ್ವಿನಿ ಮೇಡಮ್ ರವರಿಗೆ ನಾವು ಎಂದೆಂದಿಗೂ ಋಣಿಯಾಗಿರುತ್ತೇವೆ. ಪೌಷ್ಟಿಕ, ರುಚಿಕರ ಹಾಗೂ ಸ್ವಚ್ಛ ಊಟವನ್ನು ನೀಡಿ ನಮ್ಮ ಹಸಿವನ್ನು ನೀಗಿಸಿರುವ ನಿಮಗೆ ನಮ್ಮ ಹೃತ್ಪೂರ್ವಕವಾದ ಧನ್ಯವಾದಗಳು

**-ಶ್ರೀ ಚೇತನ ಎನ್. ವಿಜಯ ಕಾಲೇಜ್ ವಿದ್ಯಾರ್ಥಿ**

ವ್ಯಕ್ತಿತ್ವ-ಕರ್ತೃತ್ವ-ನೇತೃತ್ವ ಪತ್ರಿಕೆಯ ಘೋಷ ವಾಕ್ಯ. ಇದರ ಸಂಬಂಧವಾಗಿ ಎರಡು ವರ್ಷ ಅನಂತಪಥ ಸಮಾಜಕ್ಕೆ ಉತ್ತಮವಾದ ಲೇಖನಗಳ ಮೂಲಕ ಅರಿವು ಮೂಡಿಸುವ ಪ್ರಯತ್ನ ಮಾಡಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಬಹಳಷ್ಟು ದೇಶಪ್ರೇಮಿಗಳನ್ನು ಪರಿಚಯಿಸುವ ಕೆಲಸ ಮಾಡಿ ದೇಶ ಮೊದಲು ಎಂಬ ಭಾವನೆ ಎಲ್ಲರಲ್ಲೂ ಮೂಡಿಸುವ ಪ್ರಯತ್ನ ಸುಂದರವಾಗಿ ಮೂಡಿಬಂದಿದೆ. ದೇಶದ ಪ್ರಗತಿಗೆ ಅನಂತಕುಮಾರರವರಿಗೆ ಇದ್ದ ದೂರದೃಷ್ಟಿಯನ್ನು ಸರಳವಾಗಿ ಎಲ್ಲರಿಗೂ ತಿಳಿಯುವಂತೆ ಪತ್ರಿಕೆಯ ಪ್ರತಿ ಸಂಚಿಕೆಯಲ್ಲಿ ತಿಳಿಸಿ ಹೇಳಿರುವಿರಿ. ಅನಂತಪಥ ಪತ್ರಿಕೆ ಹೀಗೆ ನಿರಂತರವಾಗಿ ಪ್ರಕಟವಾಗುತ್ತಿರಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ

**-ಬಸವರಾಜ್, ಕಾರ್ಯಕರ್ತರು**

ಏಪ್ರಿಲ್ ೨೦೨೩ 'ಅನಂತ ಪಥ' ಸಂಚಿಕೆಯಲ್ಲಿ ದೇಗುಲ ದರ್ಶನ ಮಾಲೆ, ಗೀತೆಯ ಸಂದೇಶ, ಮತ್ತು ಸಸ್ಯಲೋಕದ ಪರಿಚಯದಿಂದ ಕೂಡಿದೆ. ಜೊತೆಗೆ ವಿಶೇಷವಾಗಿ ಅನಂತಕುಮಾರ್ ಅವರ ನಿಕಟವರ್ತಿ ಡಾ. ವ್ಯಾಸ ದೇಶಪಾಂಡೆ ಬರೆದಿರುವ 'ನೆನಪುಗಳಲ್ಲಿ ಚಿರಂಜೀವಿ', ಎಸ್ ಪ್ರಕಾಶ್ ಬರೆದಿರುವ 'ರಾಜಕಾರಣಕ್ಕೆ ಅನಂತ ಮಾನ ದಂಡ' ಮತ್ತು ಟಿ ಎಸ್ ಗೋಪಾಲ್ ಅನಂತಕುಮಾರ್ ಬಗ್ಗೆ ಬರೆದಿರುವ ಲೇಖನ ಮಾಲೆ, 'ಸಾರ್ಥಕ ಬದುಕಿನ ಅಂತ್ಯ - ೧೦' ಲೇಖನಗಳು ಪ್ರಕಟಗೊಂಡಿವೆ. ಮಾನವತಾವಾದಿ, ವಿಚಾರವಾದಿ ಮತ್ತು ಶಿಕ್ಷಣತಜ್ಞ ಡಾ.ಎನ್. ನರಸಿಂಹಯ್ಯನವರ ಬಗ್ಗೆ ಕೆ. ಜನಾರ್ದನ ತುಂಗ ಅವರ ವಿಶೇಷ ಲೇಖನವೂ ಇದೆ. ಒಟ್ಟಿನಲ್ಲಿ ಹಲವು ಲೇಖನ ಮಾಲೆಗಳು ಮತ್ತು ವಿಶೇಷ ವರದಿಗಳಿಂದ 'ಅನಂತಪಥ' ಸಂಚಿಕೆ ಸಮೃದ್ಧವಾಗಿ ಮೂಡಿಬಂದಿದೆ.

**- ಶ್ರೀ ಎಸ್ ಪ್ರಕಾಶ್, ಸಮಾಜಸೇವಕರು**

## ಟ್ವಿಟರ್ ಕಲರವ

Half a million people are dying prematurely every year due to global insect pollinator decline that has impacted the availability and price of healthy food. - Findings of a new modeling study. Hard to believe but this is not too far from reality.

ಪರಾಗಸ್ಪರ್ಶದ ಕೀಟಗಳ ಸಂಖ್ಯೆ ಇಳಿಮುಖವಾಗಿರುವುದರಿಂದ, ಜಾಗತಿಕವಾಗಿ ಗುಣಮಟ್ಟದ ಆಹಾರದ ಕೊರತೆ ಎದುರಾಗಿದೆ. ಜೊತೆಗೆ, ಆಹಾರ ಧಾನ್ಯಗಳ ಬೆಲೆ ಹೆಚ್ಚುತ್ತಿದೆ. ಇದರ ಪರಿಣಾಮವಾಗಿ ಪ್ರತಿವರ್ಷ 5 ಲಕ್ಷದಷ್ಟು ಜನರು ಅಕಾಲಿಕ ಮರಣ ಹೊಂದುತ್ತಿದ್ದಾರೆ ಎಂದು ಇತ್ತೀಚಿನ ಸಂಶೋಧನಾ ಅಧ್ಯಯನ ತಿಳಿಸಿದೆ. ನಂಬಲು ಕಷ್ಟವಾದರೂ ವಾಸ್ತವಕ್ಕೆ ಸಮೀಪವಾದ ಸಂಗತಿ.

**-ತೇಜಸ್ವಿನಿ ಅನಂತಕುಮಾರ್**



## ಸರಳ ಯೋಗಾಭ್ಯಾಸ

**ಎಸ್. ರಾಘವೇಂದ್ರ ಪ್ರಸಾದ್**
**ಅಧ್ಯಕ್ಷರು - ಸಹಬಾಳ್ವೆ**

### ತ್ರಿಕೋನಾಸನ (Triangle Pose)



ತ್ರಿಕೋನಾಸನ ಪದವು ಸಂಸ್ಕೃತದ ತ್ರಿಕೋನದಿಂದ ಬಂದಿದೆ. ಇದರರ್ಥ ಮೂರು ಕೋನಗಳು. ಆಸನ ಅಂದರೆ ಭಂಗಿ . ತ್ರಿಕೋನಾಕಾರದಲ್ಲಿ ಕಾಣುವ ಈ ಭಂಗಿಗೆ ತ್ರಿಕೋನಾಸನ ಎಂದು ಕರೆಯುತ್ತಾರೆ.

**ಆಸನ ಮಾಡುವ ರೀತಿ**

1) ಮೊದಲು ಸಮಸ್ಥಿತಿಯಲ್ಲಿ ನೇರವಾಗಿ ನಿಂತುಕೊಳ್ಳಿ. 2) ಪಾದಗಳನ್ನು 3 ರಿಂದ 4 ಅಡಿಯಷ್ಟು ಬೇರ್ಪಡಿಸಿ. 3) ಬಲ ಪಾದವನ್ನು 90 ಡಿಗ್ರಿಗಳಷ್ಟು ಹೊರಗೆ ಇರಿಸಿ. ಎಡ ಪಾದವನ್ನು 15 ಡಿಗ್ರಿಗಳಲ್ಲಿ ಇರಿಸಿ. ತೋಳುಗಳನ್ನು ಎರಡು ಬದಿಯಲ್ಲೂ ಅಗಲವಾಗಿ ಇಟ್ಟುಕೊಳ್ಳಿ. 4)ತೂಕವು ಎರಡೂ ಕಾಲುಗಳಿಗೆ ಸಮಾನವಾಗಿರಲಿ. ನಂತರ ದೀರ್ಘವಾಗಿ ಉಸಿರಾಡುತ್ತ ಹಾಗೂ ಉಸಿರು ಬಿಡುತ್ತಾ ದೇಹವನ್ನು ಬಲಭಾಗಕ್ಕೆ ಮತ್ತು ಸೊಂಟದಿಂದ ಕೆಳಕ್ಕೆ ಬಗ್ಗಿಸಿ. ತದನಂತರ ಬಲ ಕೈಯನ್ನು ಬಲ ಪಾದದ ಮೇಲೆ ಅಥವಾ ಪಾದದ ಪಕ್ಕದಲ್ಲಿ ನೆಲಕ್ಕೆ ತಾಗುವಂತೆ ಇರಿಸಿ. ಎಡ ಕೈಯನ್ನು ನೇರವಾಗಿ ಮೇಲಕ್ಕೆ ಎತ್ತಿ. 5) ಎರಡೂ ಕೈಗಳು ಸಾಧ್ಯವಾದಷ್ಟು ಒಂದೇ ನೇರದಲ್ಲಿರಬೇಕು. ತಲೆಯನ್ನು ಎಡಗಡೆ ತಿರುಗಿಸಿ. ಕಣ್ಣುಗಳು ಎಡ ಕೈಗಳನ್ನು ನೋಡುವಂತಿರಲಿ. ಭಂಗಿಯಲ್ಲಿ ದೃಢತೆ ಇರಲಿ. 6) ಈ ಭಂಗಿಯಲ್ಲಿ ಉಸಿರಾಟದ ಜೊತೆಗೆ ಗರಿಷ್ಠ 30 ಸೆಕೆಂಡುಗಳವರೆಗೆ ಅಥವಾ ನಿಮಗೆ ಸಾಧ್ಯವಾಗುವಷ್ಟು ಕ್ಷಣಗಳ ಕಾಲ ಇರಬಹುದು, 7) ಉಸಿರನ್ನು ತೆಗೆದುಕೊಂಡು, ಮೇಲೆ ಬರತಕ್ಕದ್ದು. ಈಗ ಪಾದಗಳನ್ನು ಜೋಡಿಸಿ ಸಮಸ್ಥಿತಿಯಲ್ಲಿ ವಿಶ್ರಮಿಸಿ. ಆಮೇಲೆ ಇನ್ನೊಂದು ಪಕ್ಕದಲ್ಲೂ ಈ ಆಸನವನ್ನು ಪುನರಾವರ್ತಿಸಿ.

**ಆಸನದ ಪ್ರಯೋಜನಗಳು**

1) ಈ ಆಸನದಿಂದ ಎದೆಯು ತೆರೆದುಕೊಳ್ಳುತ್ತದೆ; ತೊಡೆ, ಮೊಣಕಾಲು, ಪಾದ, ತೋಳುಗಳ ಶಕ್ತಿ ಹೆಚ್ಚುತ್ತದೆ. 2) ಮನಸ್ಸು ಮತ್ತು ಶಾರೀರಿಕತೆಯಲ್ಲಿ ಸಮಾನತೆ ಬರುತ್ತದೆ. 3) ಚಪ್ಪಟೆ ಕಾಲನ್ನು ತಡೆಯುವುದಲ್ಲದೆ, ಅದರ ತೊಂದರೆಯನ್ನು ಸರಿಪಡಿಸಲು ಸಹಾಯಕವಾಗುತ್ತದೆ 4) ಈ ಆಸನ ಆತಂಕ ಮತ್ತು ಒತ್ತಡವನ್ನು ಕಡಿಮೆ ಮಾಡುತ್ತದೆ. 5) ಜೀರ್ಣ ಕ್ರಿಯೆಗೆ ಹಾಗೂ ಕಿಬ್ಬೊಟ್ಟೆಯ ಸಮಸ್ಯೆಯನ್ನು ಪರಿಹರಿಸಲು ಸಹಾಯಕಾರಿ.

**ಎಚ್ಚರಿಕೆ ವಹಿಸಬೇಕಾದವರು**

1) ಸ್ಲಿಪ್ ಡಿಸ್ಕ್, ಸಿಯಾಟಿಕಾ, ಮೈಗ್ರೇನ್, ಅತಿಸಾರದ ಬಾಧೆಗೆ ಗುರಿಯಾದವರು ಮತ್ತು ಹೊಟ್ಟೆಯ ಶಸ್ತ್ರ ಚಿಕಿತ್ಸೆಗೆ ಒಳಗಾದವರು ಈ ಆಸನವನ್ನು ಮಾಡಬಾರದು. 2) ರಕ್ತದೊತ್ತಡ, ಮೊಣಕಾಲು, ಸೊಂಟ, ಭುಜ, ಕುತ್ತಿಗೆ, ಕಿಬ್ಬೊಟ್ಟೆಯ ಸಮಸ್ಯೆಯಿಂದ ಬಳಲುತ್ತಿರುವವರು ತಜ್ಞರ ಮಾರ್ಗದರ್ಶನ ಪಡೆಯಬೇಕು.

## ಗೀತೆಯ ಸಂದೇಶ

ಯಾವಾನರ್ಥ ಉದಪಾನೇ ಸರ್ವತಃ ಸಂಪ್ಲುತೋದಕೇ |
ತಾವಾನ್ ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ||೨.೪೬||

ಉದಪಾನೇ – ಬಾವಿಯಲ್ಲಿ; ಯಾವಾನ್ - ಯಾವೆಲ್ಲ; ಅರ್ಥ – ಪ್ರಯೋಜನಗಳಿವೆಯೋ, ಸರ್ವತಃ – ಅವೆಲ್ಲವನ್ನೂ ಸಂಪ್ಲುತೋದಕೇ – ಜಲಾಶಯದಲ್ಲಿಯೂ (ಪಡೆಯಬಹುದಾಗಿದೆ) ತಾವಾನ್ - ಅಂತೆಯೇ ಸರ್ವೇಷು – ಎಲ್ಲ; ವೇದೇಷು – ವೇದಗಳಲ್ಲಿರುವುದು; ಬ್ರಾಹ್ಮಣಸ್ಯ ವಿಜಾನತಃ – ಬ್ರಹ್ಮವನ್ನು– ಸಂಪೂರ್ಣವಾಗಿ ಅರಿತವನಿಗೆ (ತಿಳಿದಿರುತ್ತದೆ)

(ಹಿಂದಿನ ಶ್ಲೋಕಗಳನ್ನು ಗಮನದಲ್ಲಿಟ್ಟುಕೊಂಡರೆ) ಬ್ರಹ್ಮಜ್ಞಾನವನ್ನೇ ಪಡೆದ ಮೇಲೆ ವೇದ ತಿಳಿಸುವ ವಿಧಿವಿಧಾನಗಳನ್ನು ಅನುಸರಿಸುವ ಅಗತ್ಯವಿಲ್ಲ ಎಂದರ್ಥ. ಬ್ರಹ್ಮ ಎಂದರೆ ಈ ಪ್ರಕಟ ಜಗತ್ತು. ಒಮ್ಮೆ ಇದರ ರಹಸ್ಯವನ್ನರಿತ ಮೇಲೆ ಪ್ರತ್ಯೇಕವಾಗಿ ಇತರ ಜ್ಞಾನವನ್ನು ಪಡೆಯುವ ಅಗತ್ಯವಿಲ್ಲ. ದೊಡ್ಡ ಗುರಿಯನ್ನು ಸಾಧಿಸಿದ ಮೇಲೆ ಸಣ್ಣ ಸಣ್ಣ ಅಗತ್ಯಗಳು ತಾವಾಗಿಯೇ ಪೂರ್ಣಗೊಳ್ಳುತ್ತವೆ.

## ನಿಮ್ಮ ಪತ್ರ

'ದೇಗುಲ ದರ್ಶನ' ಎಂಬ ಸರಣಿ ವಿಡಿಯೋ ಮಾಲಿಕೆಗಳ ಮೂಲಕ ಕನ್ನಡ ನಾಡಿನ ಇತಿಹಾಸ, ದೇವಾಲಯಗಳು, ಶಿಲ್ಪವಿಶೇಷಗಳನ್ನು ಆಸಕ್ತರಿಗೆ ಉಣಬಡಿಸುತ್ತಿರುವ 'ಅದಮ್ಯ ಚೇತನ' ಸಂಸ್ಥೆ ನಮ್ಮ ಭವ್ಯ ಪರಂಪರೆಯನ್ನು ಉಳಿಸುವ ಕಾರ್ಯದಲ್ಲಿ ತೊಡಗಿಕೊಂಡಿದೆ. ಟಿ. ಎಸ್. ಗೋಪಾಲ್ ಮಾರ್ಗದರ್ಶನ ಹಾಗೂ ಕೆಂಗೇರಿ ಚಕ್ರಪಾಣಿಯವರ ನಿರೂಪಣೆ ಕೇವಲ ಸಂಶೋಧಕರಿಗಷ್ಟೇ ಅಲ್ಲದೆ ಜನ ಸಾಮಾನ್ಯರಿಗೂ ಸಹ ಸುಲಭವಾಗಿ ಅರ್ಥವಾಗುವ ಹಾಗಿದ್ದು ನಾಡಿನ ಇತಿಹಾಸದ ಉಳಿವಿಗೆ ಸಹಕಾರಿಯಾಗಿದೆ. ದೇವಾಲಯಗಳು ಮತ್ತು ಸ್ಮಾರಕಗಳನ್ನು ತಾವಿರುವ ಎಡೆಯಲ್ಲಿಯೇ ಈ ಕಾರ್ಯಕ್ರಮಗಳ ಮೂಲಕ ಪರಿಚಯ ಮಾಡಿಕೊಳ್ಳುತ್ತಿರುವ ಆಸಕ್ತರು ಸಮಯ ಸಿಕ್ಕಾಗ ಅವುಗಳಿಗೆ ಭೇಟಿ ಕೊಟ್ಟು ಕಣ್ತುಂಬಿಸಿಕೊಳ್ಳುತ್ತಿದ್ದಾರೆ. ಇಂತಹ ಮಹತ್ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸಂಸ್ಥೆಯ ಅಧ್ಯಕ್ಷರು, ಸಂಚಾಲಕರು, ನಿರೂಪಕರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ದೇಗುಲ ದರ್ಶನದಂತಹ ಕಾರ್ಯಕ್ರಮಗಳು ಯುವಜನರು ಮತ್ತು ಮಕ್ಕಳಲ್ಲಿ ಆಸಕ್ತಿಯನ್ನು ಕೆರಳಿಸಿ ಇತಿಹಾಸ ಮತ್ತು ಪರಂಪರೆಯನ್ನು ಉಳಿಸಿಕೊಳ್ಳುವ ಕೆಚ್ಚನ್ನು ತಂದರೆ ನಿಜಕ್ಕೂ ಸಾರ್ಥಕವೆನ್ನಬಹುದು.

**-ಶಶಿಧರ್ ಎಚ್.ಜಿ. ಬೆಂಗಳೂರು**

ಪುಟ 1 ರಿಂದ

# ಮಾನವೀಯ ಸಂವೇದನೆಯ ಅನಂತಚಿತ್ರಗಳು

ಅದೇ ಒಬ್ಬ ಬಡವ ಹರಿದ ಬಟ್ಟೆಯಲ್ಲಿ ಬಂದನೆಂದು ಅವನನ್ನು ಅಲಕ್ಷಿಸುವುದೂ ಸರಿಯಲ್ಲ. ಕೇಂದ್ರಸಚಿವ ಸ್ಥಾನದಲ್ಲಿದ್ದು, ಠಾಕುಠೀಕಾಗಿ ವಸ್ತ್ರಧರಿಸಿದ ಶ್ರೀಮಂತ ಉದ್ಯಮಿಯೊಬ್ಬನನ್ನು ಮಾತನಾಡಿಸುವಷ್ಟೇ ಆದರ ವ್ಯವಧಾನಗಳಿಂದ ಸಮಾಜದ ಕೆಳಸ್ತರದ ದೀನದಲಿತರೊಡನೆ ಅರ್ಥತಾಸಿನವರೆಗೆ ಸಂಭಾಷಿಸಬಲ್ಲ ಮಹನೀಯರೆಂದರೆ ಅನಂತಕುಮಾರ್ ಒಬ್ಬರೇ ಇರಬೇಕು. ತಮ್ಮನ್ನು ಕಾಣಬಂದ ಗಣ್ಯವ್ಯಕ್ತಿಗಳು, ಅಧಿಕಾರಿಗಳು ಕಾದುಕುಳಿತರೂ ಪರವಾಗಿಲ್ಲ. ಚಿಕ್ಕಪುಟ್ಟ ಬೇಡಿಕೆಗಾಗಿ ಬಂದ ಜನಸಾಮಾನ್ಯರನ್ನು ಮೊದಲು ಮಾತನಾಡಿಸಿ ಕಳುಹಿಸಬೇಕೆನ್ನುವುದು ಅನಂತಕುಮಾರರ ವಿಚಾರವಾಗಿತ್ತು.

**ಹಸಿವು, ಹಸಿವು!**

ತಮ್ಮ ಊರಿನ ಬೇಡಿಕೆ ಒಪ್ಪಿಸುವುದಕ್ಕಾಗಿ ಜನರು ದೂರದ ದೆಹಲಿಗೂ ಬರುವುದಿತ್ತು. ಅವರ ಬೇಡಿಕೆಗೂ ಅನಂತಕುಮಾರರ ಇಲಾಖೆಗೂ ಸಂಬಂಧವೇ ಇರದಿದ್ದರೂ ಜನರು ಅವರ ನಿವಾಸಕ್ಕೇ ಬಂದು ಕಾಯುವರು. ಸಚಿವರು ಮನೆಗೆ ಬಂದಕೂಡಲೇ ಅಭ್ಯಾಗತರ ಊಟತಿಂಡಿಗೆ ವ್ಯವಸ್ಥೆ ಮಾಡಲಾಗಿದೆಯೇ ಎಂಬುದನ್ನು ಮೊದಲಿಗೆ ಖಚಿತಪಡಿಸಿಕೊಂಡು, ಬಂದವರ ಕಷ್ಟಸುಖ ವಿಚಾರಿಸುವರು.

ಬೆಂಗಳೂರಿನ ನ್ಯಾಷನಲ್ ಕಾಲೇಜ್ ಮೈದಾನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವೊಂದು ಏರ್ಪಾಡಾಗಿತ್ತು. ಅನಂತಕುಮಾರರೇ ಮುಖ್ಯ ಅತಿಥಿಗಳು. ಕಾರ್ಯಕ್ರಮದ ಮಧ್ಯಾಂತರದಲ್ಲಿ ಗಣ್ಯರಿಗೆ ಪ್ರತ್ಯೇಕವಾಗಿ ಭೋಜನ ವ್ಯವಸ್ಥೆ ಮಾಡಲಾಗಿತ್ತು. ಅನಂತಕುಮಾರ್ ಅಲ್ಲಿಗೆ ಆಗಮಿಸಿದರು. ಊಟ ಬಡಿಸಲು ಇನ್ನೂ ಸಿದ್ಧತೆ ನಡೆದಿತ್ತು. ಅಷ್ಟರಲ್ಲಿ ಅವರು ಕುಳಿತಿರುವಲ್ಲಿಗೆ ಇದ್ದಕ್ಕಿದ್ದಂತೆ ಹರಿದ ಬಟ್ಟೆಯ ಹುಚ್ಚನೊಬ್ಬ ಓಡಿ ಬಂದ. ಆಗಂತುಕನ ಅವಾಂತರವನ್ನು ತಡೆಯಲು ಪೋಲೀಸರು ಧಾವಿಸಿ ಬಂದರು. ಅನಂತಕುಮಾರರ ಮುಂದೆಯೇ ನಿಂತು ಆತ ಹಸಿವು ಹಸಿವು ಎನ್ನುತ್ತ ಹೊಟ್ಟೆಯ ಮೇಲೆ ಬಡಿದುಕೊಳ್ಳತೊಡಗಿದ. ಪೋಲೀಸರು ಅವನನ್ನು ಹೊರಗೆ ಕಳುಹಿಸುವ ಯತ್ನದಲ್ಲಿದ್ದರು. ಅನಂತಕುಮಾರ್ ಕಿಂಚಿತ್ತೂ ಸಿಡಿಮಿಡಿಗೊಳ್ಳದೆ ಅವನಿಗೆ ಊಟಹಾಕಿಸಿದ ನಂತರವೇ ಕಳುಹಿಸತಕ್ಕದ್ದು ಎಂದು ಸೂಚಿಸಿದರು. ಹಾಗೆ ಬಂದವನು ಸಾಂಸ್ಕೃತಿಕ ಕಾರ್ಯಕ್ರಮದ ಪಾತ್ರಧಾರಿಯಾಗಿದ್ದ ಪರಿಚಿತವ್ಯಕ್ತಿ ಶ್ರೀಕೃಷ್ಣಸಂಪಗಾಂವಕರರೇ ಎಂದು ಸಚಿವರಿಗೆ ಆಮೇಲೆ ತಿಳಿಯಿತು.

ತಾವು ಯಾರೊಡನೆ ಸಂವಹನ ನಡೆಸಬೇಕಾಗಿದೆಯೋ ಅವರ ಸ್ಥಿತಿಗತಿಗಳನ್ನು ಗಮನಿಸುವುದೂ ಅನಂತಕುಮಾರರ ಸಂವೇದನಾ ಸೂಕ್ಷ್ಮತೆಯ ಒಂದು ಭಾಗವಾಗಿದ್ದಿತು. ಒಂದೆಡೆ ಅವರ ಭಾಷಣ ಕಾರ್ಯಕ್ರಮ ಏರ್ಪಟ್ಟಿತ್ತು. ಸಚಿವರನ್ನು ನೋಡಲು, ಭಾಷಣವನ್ನು ಆಲಿಸಲು ಬಹಳ ಜನ ಸೇರಿದ್ದರು. ಮಧ್ಯಾಹ್ನದ ಸಮಯವಾದ್ದರಿಂದ ಬಿಸಿಲೇರಿತ್ತು. ಅನಂತಕುಮಾರರ ಆಗಮನವನ್ನು ನಿರೀಕ್ಷಿಸುತ್ತ ವೇದಿಕೆಯ ನೆರಳಿನಲ್ಲಿ ಗಣ್ಯರೂ, ಸುಡುಬಿಸಿಲಲ್ಲಿ ಸಭಿಕರೂ ಕಾಯುತ್ತಿದ್ದರು. ಕಾರ್ಯಕ್ರಮಕ್ಕೆ ಆಗಮಿಸಿದ ಅನಂತಕುಮಾರ್ ಭಾಷಣ ಮಾಡಲು ವೇದಿಕೆಗೆ ಹೋಗದೆ ಬಿಸಿಲಿನಲ್ಲಿ ನಿಂತು ಜನರ ಮಧ್ಯೆಯೇ ಅರ್ಧಗಂಟೆ ಭಾಷಣ ಮಾಡಿದರು. ಭಾಷಣ ಆಲಿಸುವ ಜನರು ಬಿಸಿಲು ಲೆಕ್ಕಿಸದೆ ಇರುವಾಗ ತಾನು ಅವರ ನಡುವೆಯೇ ನಿಂತು ಮಾತನಾಡುವುದು ಸೂಕ್ತ ಎಂದು ಹೇಳಿಯೇ ಭಾಷಣಕ್ಕೆ ತೊಡಗಿದರು. ಇದು ಜನರ ಬಗ್ಗೆ ಅವರಿಗಿದ್ದ ಸಂವೇದನೆಯನ್ನು ತಿಳಿಸುತ್ತದೆ.

ತಾವು ಎಲ್ಲಿಗಾದರೂ ಹೊರಟಾಗ ತಮ್ಮೊಡನೆ ಬರುವ ಕಾರ್ಯಕರ್ತರನ್ನೂ ನೌಕರರನ್ನೂ ಮಾತನಾಡಿಸಿ ಅವರ ಯೋಗಕ್ಷೇಮ ತಿಳಿದುಕೊಳ್ಳುವುದು ಅನಂತಕುಮಾರರ ರೂಢಿ. ತಮ್ಮೊಡನೆ ಬಂದ ವಾಹನ ಚಾಲಕನ ಊಟವಾಯಿತೇ ಎಂಬುದನ್ನು ವಿಚಾರಿಸಿಯೇ ಅವರು ಪಯಣ ಮುಂದುವರಿಸುವವರು.

ಹೀಗೊಮ್ಮೆ ಅನಂತಕುಮಾರ್ ಮುಂಬಯಿಗೆ ಕಾರ್ಯನಿಮಿತ್ತ ಬಂದಿದ್ದರು. ಅವರ ಸಂಚಾರಕ್ಕಾಗಿ ಗೊತ್ತುಪಡಿಸಿದ್ದ ಕಾರಿನ ಚಾಲಕನೊಡನೆ ಮಾತನಾಡಿ ಎಂದಿನ ರೂಢಿಯಂತೆ ಅವನ ಸ್ಥಿತಿಗತಿಗಳನ್ನು ವಿಚಾರಿಸಿದ್ದರು. ಇಡೀ ದಿನದ ಬಿಡುವಿಲ್ಲದ ಕಾರ್ಯಕ್ರಮದ ನಡುವೆ ಕಾರಿನ ಚಾಲಕನ ವರ್ತನೆ ಸರಿಯಿಲ್ಲದಿರುವುದನ್ನು ಅನಂತಕುಮಾರ್ ಗಮನಿಸಿದ್ದರು. ಒರಟಾಗಿ ವರ್ತಿಸುತ್ತಿದ್ದ ಅವನ ನಡೆವಳಿಕೆಯ ಬಗೆಗೆ ಕಾರಿನ ಮಾಲೀಕರಿಗೆ ದೂರವಾಣಿಯಲ್ಲಿ ತಿಳಿಸಿಯೂ ಆಯಿತು. ಮಾರನೇ ದಿನ ಬೆಳಗ್ಗೆ ಕಾರಿನಲ್ಲಿ ಬಂದು ಕುಳಿತಾಗ ಚಾಲಕನ ಸ್ಥಾನದಲ್ಲಿ ಬೇರೆಯೊಬ್ಬನಿದ್ದ. ನಿನ್ನೆ ಬಂದವನೆಲ್ಲಿ ಎಂದು ಅನಂತಕುಮಾರ್ ಕೇಳಿದರು. ಚಾಲಕನ ದುರ್ವರ್ತನೆಯ ಬಗೆಗೆ ಮಾಹಿತಿ ಪಡೆದಿದ್ದ ಮಾಲೀಕ ಕೋಪಗೊಂಡು ಅವನನ್ನು ಕೆಲಸದಿಂದಲೇ ವಜಾಮಾಡಿ ಬೇರೆಯವನನ್ನು ಕಳಿಸಿದ್ದರೆಂದು ತಿಳಿಯಿತು.

ಅನಂತಕುಮಾರ್ ಕಾರಿನಿಂದ ಇಳಿದರು. ವಾಹನದ ಮಾಲೀಕನನ್ನು ಫೋನ್ ಮೂಲಕ ಸಂಪರ್ಕಿಸಿ ಹೇಳಿದರು "ನಿನ್ನೆಯ ಚಾಲಕ ಬಂದಹೊರತು ನಾನು ನಿಮ್ಮ ಕಾರಿನಲ್ಲಿ ಕೂರುವುದಿಲ್ಲ" ಆ ಚಾಲಕ ಬರುವವರೆಗೆ ಅನಂತಕುಮಾರ ಮತ್ತವರ ಸ್ನೇಹಿತರು ಅಲ್ಲಿಯೇ ನಿಂತಿದ್ದರು. ಚಾಲಕ ಅನಂತಕುಮಾರರಿಗೆ ನಮಸ್ಕರಿಸಿ ಕ್ಷಮೆ ಕೋರಿದ್ದು ಹಾಗಿರಲಿ, ತಪ್ಪಾಗಿ ವರ್ತಿಸಿದವನನ್ನು ತಿದ್ದಿ ತಿಳಿಹೇಳುವ ಬದಲು ಹೊಟ್ಟೆಪಾಡಿನ ಉದ್ಯೋಗವನ್ನೇ ಕಿತ್ತುಕೊಳ್ಳುವುದು ಅಮಾನವೀಯವೆಂದು ಕಾರಿನ ಮಾಲೀಕನಿಗೂ ಪಾಠ ಹೇಳಿದಂತಾಯಿತು.

**ಎರಡು ಘಟನೆಗಳು**

ಹೋಲಿಕೆಗಾಗಿ ಕೆಲವು ವರ್ಷಗಳ ಹಿಂದಿನ ಘಟನೆಯೊಂದನ್ನು ಪ್ರಸ್ತಾಪಿಸಬೇಕಾಗಿದೆ. ಕರ್ನಾಟಕದ ಗಡಿಭಾಗದ ಕ್ಷೇತ್ರವೊಂದರಲ್ಲಿ ಪ್ರಸಿದ್ಧವಾದ ದೇವಾಲಯ. ಅಲ್ಲಿಗೆ ರಾಜ್ಯಸರ್ಕಾರದ ಹಿರಿಯ ಸಚಿವರು, ಗಣ್ಯರು ಭೇಟಿನೀಡಲಿದ್ದರು. ಅರ್ಚಕರೂ ಸ್ಥಳೀಯರೂ ಸಡಗರ ಸಂಭ್ರಮಗಳಿಂದ ದೇಗುಲವನ್ನು ಅಲಂಕರಿಸಿ ವಿಶೇಷಪೂಜೆಗೆ ಎಲ್ಲ ಸಿದ್ಧತೆಮಾಡಿಕೊಂಡು ಕಾದಿದ್ದರು. ಇಬ್ಬರು ಹಿರಿಯ ಸಚಿವರ ಆಗಮನವಾಯಿತು. ಅರ್ಚಕರು ಸಚಿವರ ಹೆಸರಿನಲ್ಲಿ ಅರ್ಚನೆ ಮಾಡುವುದಕ್ಕೆಂದು ಮಂತ್ರ ಹೇಳತೊಡಗಿದರು. ಆದರೆ ಸಚಿವರು ಸಿಟ್ಟಿನಿಂದ "ಏ, ನಿನ್ನ ಅರ್ಚನೆಗೆಲ್ಲ ಟೈಮಿಲ್ಲ, ಬೇಗ ಒಂದು ಆರತಿ ಮಾಡಿ ಮುಗಿಸು, ನಾವು ಹೋಗಬೇಕು" ಎಂದು ರೇಗಿದರು. ಪಾಪ, ಅರ್ಚಕರು ಮರುಮಾತಾಡದೆ ದೇವರಿಗೆ ಆರತಿ ಬೆಳಗಿ ಪೂಜೆಯ ಶಾಸ್ತ್ರ ಮುಗಿಸಿದರು.

ಬೇರೊಂದು ಸಂದರ್ಭ. ಕೇಂದ್ರಸಚಿವರಾಗಿದ್ದ ಶ್ರೀ ಅನಂತಕುಮಾರ್ ಒಂದು ಬೆಳಗ್ಗೆ ಬೆಂಗಳೂರಿನಲ್ಲಿ ಎಲ್ಲಿಗೋ ಹೊರಟವರು ಮೈಸೂರು ರಸ್ತೆಯ ಗಾಳಿ ಆಂಜನೇಯನ ಗುಡಿಯತ್ತ ಬಂದರು. ಸಚಿವರ ಭೇಟಿ ಅನಿರೀಕ್ಷಿತವಾದುದರಿಂದ ದೇವಾಲಯದ ಅರ್ಚಕರಿಗೂ ಸಿಬ್ಬಂದಿಗೂ ಅಚ್ಚರಿ. ಅದಕ್ಕಿಂತ ಹೆಚ್ಚಾಗಿ ಕಳವಳ. ಆಗ ತಾನೇ ದೇಗುಲದ ಸ್ವಚ್ಛತಾಕಾರ್ಯ ಪ್ರಾರಂಭವಾಗಿತ್ತು. ಒಳಾವರಣ ಶುಚಿಯಾಗದೆ ಪೂಜಾಕಾರ್ಯ ಮಾಡುವಂತಿಲ್ಲ. ಅರ್ಚಕರು ನಿಜಸ್ಥಿತಿಯನ್ನು ವಿವರಿಸಿ ಪೂಜೆ ತಡವಾಗುತ್ತದೆಯೆಂದು ಸಚಿವರೊಡನೆ ಬಿನ್ನವಿಸಿಕೊಂಡರು. ಅನಂತಕುಮಾರ್ ನಗುತ್ತಲೇ, ದೇವರ ದರ್ಶನವಾಗಬೇಕೆಂದರೆ ಕಾಯಲೇಬೇಕು. ದೈವದ ಎದುರಿನಲ್ಲಿ ಮಂತ್ರಿಯಾದರೇನು, ಸಾಮಾನ್ಯನಾದರೇನು? ನಿಮ್ಮ ದಿನಚರ್ಯೆ ಯಥಾವತ್ತಾಗಿ ನಡೆಯಲಿ, ನಿಮ್ಮ ಅಭ್ಯಂತರವಿಲ್ಲದಿದ್ದರೆ ಪೂಜೆ ಪ್ರಾರಂಭವಾಗುವವರೆಗೆ ನಾನು ಇಲ್ಲಿಯೇ ಒಂದುಕಡೆ ಕುಳಿತಿರಬಹುದೇ? ಎಂದು ಕೇಳಿದರು. ಗಣ್ಯರಿಗಾಗಿ ಅರ್ಚಕರು ವಿಶೇಷ ಆಸನ ವ್ಯವಸ್ಥೆಮಾಡುವುದಕ್ಕೂ ಅವಕಾಶ ಕೊಡದೆ, ನಿಮ್ಮ ಕೆಲಸ ಮುಂದುವರಿಸಿ ಎಂದವರೇ ಅಲ್ಲೇ ಕಟ್ಟೆಯ ಮೇಲೆ ಒಂದುಕಡೆ ಆರಾಮವಾಗಿ ಕುಳಿತುಬಿಟ್ಟರು. ಅನಂತಕುಮಾರ್ ಇಂದು ನಮ್ಮೊಂದಿಗಿಲ್ಲ. ಅವರು ನಂಬಿ ನಡೆದ ಜೀವನದ ಮೌಲ್ಯಗಳೂ ನಮ್ಮಿಂದ ದೂರವಾಗುತ್ತಿವೆ. ಹೀಗಾಗಿ ಇಂದಿನ ಬದುಕಿನ ಡಾಂಭಿಕತೆ, ಜಡತೆ, ಸತ್ವಹೀನ ಪ್ರತಿಕ್ರಿಯೆಗಳು ಸಮಾಜವನ್ನು ಎತ್ತ ಕೊಂಡೊಯ್ಯಬಹುದೆಂಬ ಚಿಂತೆ ಕಾಡುತ್ತದೆ. ಅನಂತಕುಮಾರರ ಬದುಕಿನ ಪುಟಗಳಲ್ಲಿ ತುಂಬಿ ತುಳುಕುವ ಮಾನವೀಯ ಸಂವೇದನೆ ಸೂಕ್ಷ್ಮತೆಗಳು ವರ್ತಮಾನದ ಜೀವನದ ಶುಷ್ಕ ದಿನಚರ್ಯೆಗೆ ಚೈತನ್ಯದ ಪ್ರೇರಣೆ ನೀಡಲೆಂದು ಆಶಿಸೋಣ.

**-ಟಿ. ಎಸ್ ಗೋಪಾಲ್**

**(ಈ ಲೇಖನಕ್ಕೆ ಮಾಹಿತಿ ಒದಗಿಸಿದವರು ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಶ್ರೀಯುತರಾದ ಸಂಜಯ್ ಉಪಾಧ್ಯಾಯ, ಶ್ರೀಕೃಷ್ಣ ಸಂಪಗಾಂವ್‌ಕರ್, ಕೆಂಗೇರಿ ಚಕ್ರಪಾಣಿ ಮತ್ತು ಮನೋಜ್ ಭಟ್ಟರ್)**



# ಚಾಟ್‌ಜಿಪಿಟಿ ಮಾಹಿತಿ - ತಂತ್ರಜ್ಞಾನದ ಅಚ್ಚರಿ



ಪ್ರೊ. ಶಡಗೋಪನ್

**(“ದೇಶ ಮೊದಲು ಸಂವಾದ” ವೆಬಿನಾರ್ ಕಾರ್ಯಕ್ರಮದಲ್ಲಿ ಕರ್ನಾಟಕ ಜ್ಞಾನ ಆಯೋಗದ ಸದಸ್ಯರೂ IIITB ಸಂಸ್ಥೆಯ ಮಾಜಿ ನಿರ್ದೇಶಕರೂ ಆದ ಪ್ರೊ. ಶಡಗೋಪನ್ ಮಾಡಿದ ಉಪನ್ಯಾಸದ ಸಾರಾಂಶ)**

ಯಾವುದೇ ಉಪನ್ಯಾಸಗಳಲ್ಲಿ, ಯಾವುದೇ ಸುದ್ದಿಪತ್ರಿಕೆಗಳಲ್ಲಿ, ಜಗತ್ತಿನ ಯಾವುದೇ ಮೂಲೆಯ ಬಹುತೇಕ ಸಾಮಾಜಿಕ ಸಂಭಾಷಣೆಗಳಲ್ಲಿ, ಚಾಟ್‌ಜಿಪಿಟಿಯ ಪ್ರಸ್ತಾಪ ಬಂದೇ ಬರುತ್ತದೆ, ಅಷ್ಟರ ಮಟ್ಟಿಗೆ ಪ್ರಭಾವಶಾಲಿಯಾಗಿರುವ ವಿಷಯವಿದು. ಅನೇಕರು ಇದನ್ನು ಪರಮಾಣುಬಾಂಬಿನಷ್ಟು ಶಕ್ತಿಶಾಲಿ ಎಂದು ಹೇಳುತ್ತಾರೆ. ಇನ್ನು ಕೆಲವರು ಜಗತ್ತಿನ ಎಲ್ಲ ವಿಶ್ವವಿದ್ಯಾಲಯಗಳು, ವಿದ್ಯಾಸಂಸ್ಥೆಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುವ ಅಪಾಯವನ್ನು ಎದುರಿಸುತ್ತಿವೆ ಎಂಬ ವಿಪರೀತ ಅಭಿಪ್ರಾಯವನ್ನೂ ವ್ಯಕ್ತಪಡಿಸುತ್ತಿದ್ದಾರೆ. ಇಂತಹ ಪ್ರಮುಖ ವಿಷಯದ ಮೇಲೆ ಎಲ್ಲರೂ ಅತಿಯಾದ ಆಸಕ್ತಿಯನ್ನು ತೋರಿಸುತ್ತಿದ್ದಾರೆ. ಹೀಗಾಗಿ ಈ ವಿಷಯದ ಮೇಲೆ ನಮ್ಮ ಕೇಂದ್ರೀಕೃತ ಗಮನವಿರುವುದು ಅವಶ್ಯಕ.

ನಾನು ಚಾಟ್‌ಜಿಪಿಟಿ ವಿಷಯದಲ್ಲಿ ಅಷ್ಟೊಂದು ಪರಿಣತನಲ್ಲದಿದ್ದರೂ ಈ ವಿಷಯದ ಬಗ್ಗೆ ಮಾತನಾಡಲು ಒಪ್ಪಿಕೊಳ್ಳಲು ಕಾರಣವಿದೆ. ಇಂದಿನ ಯುವಕರಲ್ಲಿ ಅದರಲ್ಲೂ ವಿದ್ಯಾರ್ಥಿಗಳಲ್ಲಿ ಈ ಕುರಿತು ತುಂಬ ಕುತೂಹಲಗಳಿವೆ. ಯಾವುದೇ ಒಂದು ವಿಷಯದಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆಯನ್ನು ಚಳಿಗಾಲ ಮತ್ತು ವಸಂತಕಾಲದ ಉಪಮಾನದಿಂದ ವಿವರಿಸಬಹುದು. ವಸಂತಕಾಲದ ಪ್ರಕೃತಿಯಲ್ಲಿ ಅನೇಕ ಚಟುವಟಿಕೆಗಳು ಗರಿಗೆದರಿಕೊಳ್ಳುತ್ತವೆ. ಆದರೆ ಚಳಿಗಾಲದಲ್ಲಿ ಇಡೀ ಪ್ರಕೃತಿಯೇ ಮುದುಡಿಕೊಳ್ಳುತ್ತದೆ. ಕೃತಕ ಬುದ್ಧಿಮತ್ತೆಯ ವಸಂತಕಾಲ ಮತ್ತು ಚಳಿಗಾಲ ಕಳೆದ ಶತಮಾನದ ಐವತ್ತು ಮತ್ತು ಅರವತ್ತರ ದಶಕಗಳಲ್ಲಿಯೇ ಕಾಣಿಸಿಕೊಂಡಿತ್ತು. ಎಪ್ಪತ್ತರ ದಶಕದಲ್ಲಿ ಮೊದಲ ಪೀಳಿಗೆಯ ಕೃತಕ ಬುದ್ಧಿಮತ್ತೆಯ ವಿಷಯದಲ್ಲಿ ಅಪಾರವಾದ ಆಸಕ್ತಿ ಕಾಣಿಸಿಕೊಂಡಿತು. ಇಂದು ನಾವು ಬಳಸುತ್ತಿರುವುದು ಎರಡನೆಯ ಪೀಳಿಗೆಯ ಕೃತಕ ಬುದ್ಧಿಮತ್ತೆ. ಅಂದು ದತ್ತಾಂಶ ಸಂಸ್ಕರಣೆಗೆ ಸೀಮಿತವಾಗಿದ್ದ ಕೃತಕ ಬುದ್ಧಿಮತ್ತೆ ಇಂದು ಅನೇಕ ಕೆಲಸಗಳನ್ನು ನಿರ್ವಹಿಸಲು ಶಕ್ತವಾಗಿದೆ.

ELIZA - ಎಲಿಜಾ ಎಂಬ ೧೯೬೪ರ ಪ್ರೋಗ್ರಾಮನ್ನು ಗಮನಕ್ಕೆ ತಂದುಕೊಳ್ಳಿ. ಇದನ್ನು ಸೂಕ್ಷ್ಮವಾಗಿ ನೋಡಿದರೆ ಇದು ಇಂದಿನ ಚಾಟ್‌ಜಿಪಿಟಿ ತಂತ್ರಜ್ಞಾನವೇ ಎನ್ನಿಸುತ್ತದೆ.

ಚಾಟ್‌ಬಾಟ್ ಈಗಾಗಲೇ ಬಳಕೆಯಲ್ಲಿರುವ ಪ್ರೋಗ್ರಾಮ್. (ಇದಕ್ಕೆ ರೋಬೋಟಿಕ್ ಸಾಮರ್ಥ್ಯವಿರುವುದರಿಂದ ಇದನ್ನು ಚಾಟ್‌ಬಾಟ್ ಎನ್ನುತ್ತಾರೆ) ಇದು ಕೇವಲ ಸಂಭಾಷಣೆಗೆ ಬಳಕೆಯಾಗುವ ಉಪಕರಣ. ಚಾಟ್‌ಜಿಪಿಟಿ ಕೂಡ ಒಂದು ಕೃತಕ ಬುದ್ಧಿಮತ್ತೆ. ಓಪನ್‌ಎಐ ಸಂಸ್ಥೆ ಇದನ್ನು ಆವಿಷ್ಕರಿಸಿ ೨೦೨೨ರ ನವೆಂಬರ್ ತಿಂಗಳಿನಲ್ಲಿ ಬಳಕೆಗೆ ಬಿಡುಗಡೆ ಮಾಡಿದೆ. ಇದು ಪರಿವರ್ತಕದಂತೆ (Transformer) ಕೆಲಸ ಮಾಡುತ್ತದೆ. ಬಿಡುಗಡೆಯಾದ ಅಲ್ಪಾವಧಿಯಲ್ಲಿಯೇ ಜಗತ್ತಿನಾದ್ಯಂತ ಇದು ಬಿರುಗಾಳಿಯೆಬ್ಬಿಸಿದೆ.

ಇದ ಮಹತ್ವವನ್ನು ಇನ್ನೊಂದು ರೀತಿಯಲ್ಲಿ ವಿವರಿಸೋಣ. ನೀವು ಬೆಂಗಳೂರಿಗೆ ಹೊಸದಾಗಿ ಬಂದಿದ್ದೀರಿ. ಯಾರೋ ಒಬ್ಬರು ನಿಮಗೆ ಬಿಸಿಬೇಳೆ ಬಾತ್ ಏನೆಂದು ಪರಿಚಯಿಸಲು ಬಯಸುತ್ತಾರೆ. ಆಗ ಅವರು ಅದರ ಬಣ್ಣ, ಅದಕ್ಕೆ ಬಳಸುವ ಪದಾರ್ಥಗಳು, ಅದರ ರುಚಿ ಮುಂತಾದವುಗಳನ್ನು ವಿವರಿಸುತ್ತ ನಿಮ್ಮಲ್ಲಿ ಬಿಸಿಬೇಳೆ ಬಾತ್ ಸವಿಯುವ ಆಸೆಯನ್ನು ಹುಟ್ಟಿಸಬಹುದು. ಆದರೆ ಬಿಸಿಬೇಳೆ ಬಾತ್ ಮಾಡಲು ಬೇಕಾದ ಕೌಶಲವೇ ಬೇರೆ. ಅದನ್ನು ವಿವರಿಸುವ ಭಾಷೆಯೇ ಬೇರೆ. ಅದೇರೀತಿ, ಚಾಟ್‌ಜಿಪಿಟಿಯ ನಿರ್ಮಾಣ ಮತ್ತು ಅದರ ಬಳಕೆ ಎರಡೂ ಬೇರೆ ಬೇರೆ ವಿಷಯಗಳು.

ನಿರ್ದೇಶಿತ ಕಲಿಕೆ (Supervised Learning) ಮತ್ತು ಬಲವರ್ಧಿತ ಕಲಿಕೆ (Reinforced Learning) ಎಂಬ ಎರಡೂ ಭಾಷಾ ಮಾದರಿಗಳನ್ನು ಚಾಟ್‌ಜಿಪಿಟಿ ಬಳಸಿಕೊಳ್ಳುತ್ತದೆ. ಇದು ನಿಮಗಾಗಿ ಉತ್ತಮ ಪ್ರಬಂಧಗಳನ್ನು ರಚಿಸಬಲ್ಲದು, ಸರಳ ಪ್ರೋಗ್ರಾಮ್‌ಗಳನ್ನು ಬರೆಯಬಲ್ಲದು. ಇದು ಬರಹಗಳನ್ನು ನಿರಾಯಾಸವಾಗಿ ಭಾಷಾಂತರ ಮಾಡಿಕೊಡುವ ಸಾಮರ್ಥ್ಯವನ್ನು ಕೂಡ ಹೊಂದಿದೆ. ಗೂಗಲ್ ನಿಮಗೆ ಯಾವ ಪುಸ್ತಕಗಳನ್ನು ಓದಬೇಕೆಂದು ತಿಳಿಸಿದರೆ ಚಾಟ್‌ಜಿಪಿಟಿ ಆ ಪುಸ್ತಕಗಳಲ್ಲಿನ ನಿರ್ದಿಷ್ಟ ಭಾಗಗಳನ್ನು ನಿಮಗಾಗಿ ಓದಿ ತಿಳಿಸುತ್ತದೆ. (ಉದಾಹರಣೆಗೆ ಇದು ಪ್ರಧಾನಿ ಮೋದಿಯವರ ಭಾಷಣವನ್ನು ಸಿದ್ಧಪಡಿಸಿಕೊಡುತ್ತದೆ, ಶಡಗೋಪನ್‌ರವರ ಮೇಲೆ ಪದ್ಯ ರಚಿಸುತ್ತದೆ, ಸಮಸ್ಯೆಯನ್ನು ಬಗೆಹರಿಸುವ ಪೈಥಾನ್ ಪ್ರೋಗ್ರಾಮ್ ಬರೆಯುತ್ತದೆ, ಭಗವದ್ಗೀತೆಯಲ್ಲಿ ಬರುವ ಕರ್ಮದ ಕುರಿತಾದ ಶ್ಲೋಕಗಳನ್ನು ಸಂಗ್ರಹಿಸಿಕೊಡುತ್ತದೆ.)

ಕರ್ನಾಟಕದ ಮುಂದಿನ ಮುಖ್ಯಮಂತ್ರಿ ಯಾರಾಗಬಹುದು ಅಥವಾ ಕರ್ನಾಟಕದ ಚುನಾವಣೆಯ ಫಲಿತಾಂಶವೇನು ಎಂದು ಇಂದು ಪ್ರಶ್ನೆ ಕೇಳಿದರೆ ಚಾಟ್‌ಜಿಪಿಟಿ ಉತ್ತರ ಕೊಡಲಾರದು. ಆ ವಿಷಯಗಳ ಬಗ್ಗೆ ಮಾಹಿತಿ ಕೇಳಿದರೆ “ಈ ಬಗ್ಗೆ ನನಗೆ ತರಬೇತಿ ಇಲ್ಲ” ಎಂದು ಇದು ಉತ್ತರಿಸುತ್ತದೆ. ಚಾಟ್‌ಜಿಪಿಟಿ ನಮಗೆ ಸವಾಲನ್ನೊಡ್ಡುತ್ತದೆ ಎಂಬ ಬಗ್ಗೆ ಭಯ ಬೇಡ. ಇದು ಈಗಾಗಲೇ ಇರುವ ಮಾಹಿತಿಗಳನ್ನು ಮಾತ್ರ ಬಳಸಿಕೊಳ್ಳುತ್ತದೆ. ನಾನು ಏನು ಮಾತನಾಡುತ್ತಿದ್ದೇನೆ ಎಂದು ತಿಳಿಸಲಾರದು, ನಾನು ಈ ಹಿಂದೆ ಮಾತನಾಡಿದ ವಿಷಯಗಳನ್ನು ಮಾತ್ರ ಇದು ತಿಳಿಸಬಲ್ಲದು.

ಇದು ಎಲ್ಲ ಪ್ರೋಗ್ರಾಮ್‌ಗಳನ್ನು ಬರೆಯಲಾರದು. ಈ ವಿಷಯದಲ್ಲಿ ಮಾನವ ಮೆದುಳಿನ ಸಾಮರ್ಥ್ಯ ಹೆಚ್ಚು, ಹೀಗಾಗಿ ಭಯ ಬೇಕಾಗಿಲ್ಲ. ಇದು ಕವನಗಳನ್ನು ಬರೆಯಬಲ್ಲದು. ಈ ಕವನಗಳು ವಿನೋದಮಯವಾಗಿರಬಹುದು, ನವ್ಯ, ನವೀನವಾಗಿರಬಹುದು. ನಮ್ಮ ಆಸಕ್ತಿ ಮತ್ತು ನಿರ್ದೇಶನಗಳಿಗನುಗುಣವಾಗಿ ಇದು ಕವನಗಳನ್ನು ರಚಿಸುತ್ತದೆ. ಜಗತ್ತಿನ ಅನೇಕ ಭಾಷೆಗಳ ಬಗ್ಗೆ ಇದಕ್ಕೆ ತರಬೇತಿಯಿರುವುದರಿಂದ ಇದು ನಿರಾಯಾಸವಾಗಿ ಭಾಷಾಂತರ ಕಾರ್ಯವನ್ನು ಮಾಡುತ್ತದೆ.

ನೀವು ಹಿಂದಿನ ಕಾಲದ ಟೆಲಿಫೋನ್ ಡೈರೆಕ್ಟರಿ ನೋಡಿದ್ದೀರಿ. ಅದು ನಿಮಗೆ ಅನೇಕ ವಿಷಯಗಳ ಬಗ್ಗೆ ಮಾಹಿತಿಗಳನ್ನು ಪಡೆಯುವ ಅವಕಾಶಗಳ ಬಗ್ಗೆ ಸೂಚನೆ ನೀಡುತ್ತದೆ. ಉದಾಹರಣೆಗೆ ನಿಮಗೆ ಐಐಟಿ ಕಾನ್ಪುರದ ಬಗ್ಗೆ ತಿಳಿದುಕೊಳ್ಳಬೇಕಾಗಿದೆ. ನೀವು ಡೈರೆಕ್ಟರಿಯಲ್ಲಿ ಐಐಟಿ ಕಾನ್ಪುರದ ದೂರವಾಣಿ ಸಂಖ್ಯೆ ಹುಡುಕಿ ಆ ಸಂಖ್ಯೆಗೆ ಕರೆ ಮಾಡಿ ಮಾಹಿತಿ ಪಡೆಯುತ್ತೀರಿ. ಟೆಲಿಫೋನ್ ಡೈರೆಕ್ಟರಿ ನಿಮಗೆ ಮಾಹಿತಿಗಳ ಮೂಲದ ಕಡೆ ನಿರ್ದೇಶನ ನೀಡುತ್ತದೆ. ಇದರ ಮುಂದುವರಿಕೆಯೇ ಗೂಗಲ್. ದೂರವಾಣಿ ಸಂಖ್ಯೆಯ ಜೊತೆಗೆ ಇನ್ನೂ ಅನೇಕ ಮಾಹಿತಿಗಳನ್ನು ನೀಡುವ ಸಾಮರ್ಥ್ಯವನ್ನು ಗೂಗಲ್ ಹೊಂದಿದೆ. ಹೀಗಿದ್ದರೂ ಗೂಗಲ್ ಹೆಚ್ಚಿನ ಮಾಹಿತಿಗಳನ್ನು ನೀಡುವ ಬೇರೆ ಬೇರೆ ಜಾಲತಾಣಗಳಿಗೆ ಕೊಂಡಿಯನ್ನು ನೀಡುತ್ತದೆ ಎಂದು ಮಾತ್ರ ಹೇಳಬಹುದು. ನಿಮಗೆ ಹೈದರಾಬಾದಿನಿಂದ ಬೆಂಗಳೂರಿಗೆ ಬರಬೇಕಾಗಿದೆ, ಇದರ ಬಗ್ಗೆ ಮಾರ್ಗದರ್ಶನದ ಕೊಂಡಿಗಳನ್ನು ಗೂಗಲ್ ನಿಮಗೆ ನೀಡುತ್ತದೆ. ಆದರೆ ಚಾಟ್‌ಜಿಪಿಟಿ ಇನ್ನೂ ಹಲವಾರು ಹೆಜ್ಜೆ ಮುಂದೆ ಹೋಗುತ್ತದೆ. ಇದು ಮಾಹಿತಿಗೆ ಕೊಂಡಿಗಳನ್ನು ನೀಡುವುದರ ಬದಲು ಮಾಹಿತಿಯನ್ನೇ ನೀಡುತ್ತದೆ.

ಅನಂತಕುಮಾರ್ ಪ್ರತಿಷ್ಠಾನದ ಬಗ್ಗೆ ಕೇಳಿದರೆ ಇದು ಕೇವಲ ವಿಳಾಸ, ಮಾರ್ಗ ಮತ್ತು ಕಾರ್ಯಕ್ರಮಗಳ ವಿವರ ನೀಡುವುದಕ್ಕೆ ಸೀಮಿತವಾಗದೆ ಅದು ಪ್ರತಿಷ್ಠಾನದ ಬಗ್ಗೆ ಒಂದು ಸುಂದರವಾದ ಪ್ರಬಂಧವನ್ನೇ ಬರೆಯುತ್ತದೆ.

ಚಾಟ್‌ಜಿಪಿಟಿ ನಿಮ್ಮ ಮುಂದೆ ಅವಕಾಶಗಳ ಖಜಾನೆಯನ್ನೇ ತೆರೆಯುತ್ತದೆ. ಅನೇಕ ಮಾಹಿತಿಗಳನ್ನು ಓದಿ ಸಂಗ್ರಹಿಸಿ ಒದಗಿಸುವ ಮೂಲಕ ನಿಮ್ಮ ಸಾಮಾನ್ಯ ಜ್ಞಾನವನ್ನು ಅಸಾಧಾರಣ ರೀತಿಯಲ್ಲಿ ವರ್ಧಿಸುತ್ತದೆ. ಮಾಹಿತಿ ಒದಗಿಸುವವರ ಇಚ್ಛೆಗೆ ಬದಲಾಗಿ ನಿಮಗೆ ಬೇಕಾದ ರೀತಿಯಲ್ಲಿ ಮಾಹಿತಿಯನ್ನು ಪಡೆಯುವ ಅವಕಾಶ ನಿಮಗೆ ಒದಗಿಸುತ್ತದೆ.

ಚಾಟ್-ಜಿಪಿಟಿಗೆ ಯಾವುದೇ ಒಂದು ವಿಷಯದ ಬಗ್ಗೆ ಪ್ರಶ್ನೆಗಳನ್ನು ಕೇಳಿದಾಗ, ಅದು ವ್ಯವಸ್ಥಿತವಾಗಿ, ಆ ವಿಷಯದ ಕುರಿತಂತೆ ಪದಗಳನ್ನು ಮತ್ತು ವಿಷಯಗಳನ್ನು ಕ್ರೋಡೀಕರಿಸಿ ಶಿಸ್ತುಬದ್ಧವಾಗಿ ಮಾಹಿತಿ ನೀಡುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ಮತ್ತು ಇತರ ಉದ್ಯೋಗ ವಲಯದಲ್ಲಿ ಸಹಾಯವಾಗುತ್ತಿದೆ. ಆದರೆ , ಕೆಲವೊಮ್ಮೆ ತಪ್ಪು ಮಾಹಿತಿಗಳನ್ನು ಕೊಡುವ ಅಪಾಯ ಕೂಡ ಇದೆ.

ಇದರ ಬಳಕೆ ಹೆಚ್ಚಾದಂತೆ ಮುಂದಿನ ದಿನಗಳಲ್ಲಿ ಮನುಷ್ಯನ ಸಾಮಾನ್ಯ ಜ್ಞಾನದ ಮೇಲೂ ಪರಿಣಾಮ ಬೀರಬಹುದು. ಆದುದರಿಂದ ಭಾರತದ ಕೇಂದ್ರ ಪ್ರಾಧಿಕಾರಗಳು, ನೀತಿ ಆಯೋಗಗಳು ಕೃತಕ ಬುದ್ಧಿಮತ್ತೆ ಮತ್ತು ಚಾಟ್‌ಜಿಪಿಟಿ ದುರುಪಯೋಗವಾಗದ ರೀತಿಯಲ್ಲಿ ಸೂಕ್ತ ನಿಯಮಗಳ ಚೌಕಟ್ಟನ್ನು ನಿರೂಪಿಸಬೇಕು.

(ಇಡೀ ಉಪನ್ಯಾಸ ಮತ್ತು ಪ್ರಶ್ನೋತ್ತರಗಳನ್ನು ಕೇಳಿಸಿಕೊಳ್ಳಲು ಯೂಟ್ಯೂಬ್/ AnanthKumar Pratishthana ವೀಕ್ಷಿಸಿ.)



# ಅನಾನಸ್

ಸಸ್ಯಲೋಕ ಪರಿಚಯ ಮಾಲಿಕೆ- 20

ಅನಾನಸಿನ ಸಸ್ಯಶಾಸ್ತ್ರೀಯ ಹೆಸರು ಅನಾನಸ್ ಕೊಮೊಸಸ್. ಇದು ಉಷ್ಣ ವಲಯದ ಸಸ್ಯವಾಗಿದ್ದು ಮೂಲತಃ ದಕ್ಷಿಣ ಅಮೆರಿಕದ ಸ್ಥಳೀಯ ಸಸ್ಯವಾಗಿದೆ. 1820ರಿಂದೀಚೆಗೆ ಇದನ್ನು ಜಗತ್ತಿನಾದ್ಯಂತ ಹಲವಾರು ದೇಶಗಳಲ್ಲಿ ವಾಣಿಜ್ಯ ಬೆಳೆಯಾಗಿ ಬೆಳೆಯುತ್ತಿದ್ದಾರೆ. ಭಾರತ, ಇಂಡೋನೇಶಿಯಾ, ಫಿಲಿಪೈನ್ಸ್ ಮುಂತಾದ ದೇಶಗಳಲ್ಲಿ ವ್ಯಾಪಕವಾಗಿ ಅನಾನಸನ್ನು ಬೆಳೆಯುತ್ತಿದ್ದಾರೆ. ಕರ್ನಾಟಕದ ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಇದರ ಕೃಷಿಯನ್ನು ನೋಡಬಹುದು.



**ಸಸ್ಯವಿವರ-** ಚಿಕ್ಕದಾದರೂ ದಪ್ಪ ಕಾಂಡ, ಕಾಂಡದಿಂದಲೇ ಒಡಮೂಡುವ ಉದ್ದವಾದ, ಅಂಚುಗಳಲ್ಲಿ ಮುಳ್ಳುಗಳನ್ನು ಹೊಂದಿರುವ ಎಲೆಗಳನ್ನು ಅನಾನಸ್ ಗಿಡಗಳು ಹೊಂದಿರುತ್ತವೆ, ಇವು ನೋಡುವುದಕ್ಕೆ ಪೊದರಿನಂತಿರುತ್ತವೆ. ಸುಮಾರು ಒಂದೂವರೆಯಿಂದ ನಾಲ್ಕು ಅಡಿಗಳ ವರೆಗೆ ಬೆಳೆಯುವ ಗಿಡಗಳು ಸುಮಾರು 18 ರಿಂದ 32 ತಿಂಗಳಲ್ಲಿ ಫಲ ಬಿಡಲು ಸಿದ್ಧವಾಗುತ್ತವೆ. ಫಲ ಬಿಡುವ ಕಾಲದಲ್ಲಿ ಸುಮಾರು ಇನ್ನೂರು ಹೂವುಗಳ ಗುಚ್ಛ ಕಾಣಿಸಿಕೊಂಡು ಅವುಗಳೆಲ್ಲ ಸಂಯುಕ್ತವಾಗಿ ಒಂದೇ ಹಣ್ಣಿನಂತೆ ಫಲಿಸುತ್ತವೆ.

ಈ ಹಣ್ಣುಗಳ ತಲೆಯಲ್ಲಿ ಎಲೆಗಳ ಒಂದು ಕಿರೀಟ ಕಾಣಿಸುತ್ತದೆ. ಈ ಕಿರೀಟವನ್ನು ಪ್ರತ್ಯೇಕಿಸಿ ಹೊಸ ಗಿಡಗಳನ್ನು ಬೆಳೆಯಬಹುದು. ಕಾಂಡದಿಂದ ಮೂಡುವ ಅಡ್ಡ ಚಿಗುರುಗಳನ್ನೂ ಬೇರೆಡೆ ನೆಟ್ಟು ಕೃಷಿ ಮಾಡಬಹುದು. ತುಂಬಾ ತೇವಾಂಶ ಮತ್ತು ಸೂರ್ಯನ ಬೆಳಕನ್ನು ಬೇಡುವ ಗಿಡಗಳಿವು.

**ಉಪಯೋಗಗಳು-** * ಅನಾನಸ್ ಹಣ್ಣಿನಲ್ಲಿ ಕೊಲೆಸ್ಟ್ರಾಲ್ ಇರುವುದಿಲ್ಲ. * ಇದರಲ್ಲಿ ವಿಟಮಿನ್ ಎ, ಬಿ, ಸಿ, ಪೊಟಾಷಿಯಂ, ಮ್ಯಾಂಗನೀಸ್, ಸತುವು ಹಾಗೂ ದೇಹಕ್ಕೆ ಅಗತ್ಯವಾದ ಇತರ ಖನಿಜಾಂಶಗಳಿವೆ. * ಇದರಲ್ಲಿರುವ ಆ್ಯಂಟಿ ಆಕ್ಸಿಡೆಂಟ್‌ಗಳಿಂದ ರೋಗನಿರೋಧಕ ಶಕ್ತಿ ವರ್ಧಿಸುತ್ತದೆ. ತನ್ಮೂಲಕ ಮಧುಮೇಹ ಮತ್ತು ಹೃದಯ ಸಂಬಂಧಿ ರೋಗಗಳ ಸಾಧ್ಯತೆ ಕಡಿಮೆಯಾಗುತ್ತದೆ. *ಇದು ಜೀವಕೋಶಗಳು ನಾಶವಾಗುವುದನ್ನು ತಡೆಯುವ ಸಾಮರ್ಥ್ಯ ಹೊಂದಿದೆ. *ಅನಾನಸ್ ಹಣ್ಣಿನಲ್ಲಿರುವ ಬೀಟಾ-ಕ್ಯಾರೊಟಿನ್ ಅಂಶಗಳು ಕಣ್ಣಿನ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹಾಯಮಾಡುತ್ತವೆ, ಜೊತೆಗೆ ಅಸ್ತಮಾ ಸಮಸ್ಯೆಯನ್ನೂ ಕಡಿಮೆ ಮಾಡುತ್ತದೆ. *ಅನಾನಸ್‌ನಲ್ಲಿರುವ ಮ್ಯಾಂಗನೀಸ್ ಮತ್ತು ಕ್ಯಾಲ್ಸಿಯಂ ಮೂಳೆಗಳನ್ನು ಬಲಪಡಿಸಲು ಸಹಾಯಮಾಡುತ್ತದೆ, ಜೊತೆಗೆ ಹಲ್ಲಿನ ಆರೋಗ್ಯವನ್ನು ಕಾಪಾಡುತ್ತದೆ. *ಸತು, ತಾಮ್ರ ಮತ್ತು ಕ್ಯಾಲ್ಸಿಯಂನೊಂದಿಗೆ ಸಂಯೋಜನೆಗೊಂಡಿರುವುದರಿಂದ ದೇಹ ಪೋಷಕಾಂಶಗಳನ್ನು ಸುಲಭವಾಗಿ ಹೀರಿಕೊಳ್ಳುತ್ತದೆ. *ರಕ್ತ ಹೆಪ್ಪುಗಟ್ಟುವುದನ್ನು ತಡೆಗಟ್ಟುತ್ತದೆ, ಆದರೆ ರಕ್ತ ಹೆಪ್ಪುಗಟ್ಟದ ಸಮಸ್ಯೆ ಇರುವವರು ಈ ಹಣ್ಣು ತಿನ್ನಬಾರದು. *ಅನಾನಸ್‌ನಲ್ಲಿರುವ ವಿಟಮಿನ್ ಬಿ ಮಾನಸಿಕ ಒತ್ತಡವನ್ನು ಕಡಿಮೆ ಮಾಡುತ್ತದೆ. *ಅನಾನಸ್ ತ್ವಚೆಯ ಆರೋಗ್ಯವನ್ನು ಹೆಚ್ಚಿಸುತ್ತದೆ, ಇದನ್ನು ಫೇಶಿಯಲ್ ಮಾಸ್ಕ್ ಆಗಿಯೂ ಬಳಸಬಹುದು. ಒಂದು ತುಂಡು ಅನಾನಸ್ ತೆಗೆದುಕೊಂಡು ಅದರ ರಸವನ್ನು ಮುಖಕ್ಕೆ ಹಚ್ಚಿ, ಒಣಗಿದ ಬಳಿಕ ಉಗುರು ಬೆಚ್ಚಗಿನ ನೀರಿನಿಂದ ಮುಖ ತೊಳೆಯುವುದರಿಂದ ಮುಖದ ಕಾಂತಿ ಹೆಚ್ಚುವುದು. ಮೊಡವೆಯೂ ನಿವಾರಣೆಯಾಗುವುದು. *ತಲೆ ಹೊಟ್ಟು ನಿವಾರಣೆಗೆ, ಅಜೀರ್ಣದ ಸಮಸ್ಯೆ ನಿವಾರಣೆಗೆ *ಜವಳಿ ಕೈಗಾರಿಕೆಯಲ್ಲಿಯೂ ಅನಾನಸ್ ಎಲೆಗಳ ಬಳಕೆಯಾಗುತ್ತದೆ. ಉಪ್ಪಿನಕಾಯಿ, ಹಣ್ಣಿನ ರಸ, ವ್ಯಂಜನಗಳು ಮುಂತಾದ ಹಲವು ಬಗೆಗಳಲ್ಲಿ ದಿನಬಳಕೆಯ ಆಹಾರ ಪದಾರ್ಥವಾಗಿಯೂ ಅನಾನಸ್ ಬಳಕೆಯಾಗುತ್ತದೆ.



ಛಾಯಾ ಓಕ್ ಬಾಪಟ್

## ಹಸಿರು ಭಾನುವಾರ - ತಿಂಗಳ ಅಂಕಿಅಂಶ

| ಹಸಿರು ಭಾನುವಾರದ ಸಂಖ್ಯೆ | ಸ್ಥಳ | ಭಾಗವಹಿಸಿದವರು | ನೆಡಲಾದ ಗಿಡಗಳ ಸಂಖ್ಯೆ/ ಚಟುವಟಿಕೆಗಳು |
|---|---|---|---|
| 382 23/04/23 | ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಭವನದ ಬಿಯು-ಬಯೋ ಪಾರ್ಕ್ -1 | ಬಿ ಎಂ ಎಸ್, ಐಎಫ್‌ಎಸ್ ಕಾಲೇಜಿನ ವಿದ್ಯಾರ್ಥಿಗಳು, ಕಲ್ಪ-ರಕ್ಷ ಉಚಿತ ವಸತಿ ನಿಲಯದ ಮಕ್ಕಳು ಮತ್ತು ಅದಮ್ಯ ಚೇತನದ ಕಾರ್ಯಕರ್ತರು. | ಈ ಹಿಂದೆ ನೆಟ್ಟ ಗಿಡಗಳಿಗೆ ನೀರುಣಿಸುವುದು ಮತ್ತು ಗಿಡದ ಬುಡದ ಸುತ್ತಮುತ್ತ ಸ್ವಚ್ಛಗೊಳಿಸಲಾಯಿತು. |
| 383 30/04/23 | ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಜಿಇಎಫ್ ಆವರಣ | ದಯಾನಂದ ಕಾಲೇಜು, ನೃಪತುಂಗ ಕಾಲೇಜು, ಬಿಎಂಎಸ್ ಕಾಲೇಜು, ಎಚ್.ಪಿ. ಟೀಮ್, ಕಲ್ಪರಕ್ಷ ಮಕ್ಕಳು ಮತ್ತು ಅದಮ್ಯ ಚೇತನದ ಕಾರ್ಯಕರ್ತರು. | 10 ನೇರಳೆ, 10 ಸೀಬೆ ಗಿಡಗಳನ್ನು ನೆಡಲಾಯಿತು. ಅದಮ್ಯ ಚೇತನದಲ್ಲಿ ತೊಳೆದ ಅಕ್ಕಿ ನೀರನ್ನು ಗಿಡಗಳಿಗೆ ಹಾಕಲಾಯಿತು. |
| 384 07/05/23 | ಬೆಂಗಳೂರು ವಿಶ್ವವಿದ್ಯಾಲಯ ಎನ್‌ಜಿಇಎಫ್ ಬಯೋ ಪಾರ್ಕ್ ಆವರಣ | ಗ್ಲೋಬಲ್ ಕಾಲೇಜು, ಇಂಟೆಲ್ ಸ್ಕೂಲ್ ಆಫ್ ಎಕ್ಸಲೆನ್ಸ್, ನೃಪತುಂಗ ಕಾಲೇಜು, ಬಿಎಂಎಸ್ ಕಾಲೇಜು, ಕಲ್ಪ-ರಕ್ಷ ಉಚಿತ ವಸತಿ ನಿಲಯದ ಮಕ್ಕಳು ಮತ್ತು ಅದಮ್ಯ ಚೇತನದ ಕಾರ್ಯಕರ್ತರು ಭಾಗವಹಿಸಿದ್ದರು. | ನೇರಳೆ, ಬೆಟ್ಟದ ನೆಲ್ಲಿಕಾಯಿ ಮತ್ತು ಮಾವು ಸೇರಿಸಿ 10 ಗಿಡಗಳನ್ನು ನೆಟ್ಟು ಆವರಣದ ಸ್ವಚ್ಛತಾ ಕಾರ್ಯವನ್ನು ಸಹ ಮಾಡಲಾಯಿತು. |
| 385 14/05/23 | ಜಯನಗರದ ಜಲ ಭವನ ರಸ್ತೆಯ ಎನ್.ಎ.ಎಲ್ ಲೇಔಟ್, ಆವರಣ | ಬಿಎಂಎಸ್‌ಸಿಇ, ಬಿಎಂಎಸ್, ಮಲ್ಲೇಶ್ವರದ MLAFGCW ಕಾಲೇಜು, ಜಯನಗರದ ವಿಜಯ ಕಾಲೇಜು, LetsTagOn, Electronic City, Nitte Meenakshi Inst of Tech ಮತ್ತು ಅದಮ್ಯ ಚೇತನದ ಕಾರ್ಯಕರ್ತರು ಭಾಗವಹಿಸಿದ್ದರು. | 5 ಹೊಂಗೆ , 5 ನೇರಳೆ , 5 ಕಾಡು ಬಾದಾಮಿ ಮತ್ತು 5 ಟಬಿಬಿಯಾ ರೋಸಿಯಾ ಗಿಡಗಳನ್ನು ನೆಡಲಾಯಿತು. |


ಅನಂತಪಥ

Editorial Advisory Committee: **Tejaswini Ananthkumar / Gopal T.S / K. Janardhana Thunga**
Layout: **Ananthakumar Pratishthana** Assistance: **Sanjay R / Trivikram Joshi / Madhumathi Kumbaluru**
Inputs: **Poornaprajna / Srikanth K / Veena Vittal**
Photographs: **Gopal TS / Chakrapani Kengeri / Internet Sources / AKP / ACF**
Acknowledgements: **Raghavendra Prasad / G M Inamdar / Chaya Bapat**
Sketch: **Raghupathi Sringeri** Printed at: **Rashtrothana Mudranalaya, Chamrajpet, Bengaluru**
Published by: **Tejaswini Ananthkumar**



For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 I Email: ananth.path@akp.org.in



ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪತ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

ವ್ಯಕ್ತಿ ವಿಶೇಷ ಮಾಲಿಕೆ

# ಬದುಕು ಕಲಿಸುವ ವಿಶ್ವಸಂತ ಶ್ರೀ ಶ್ರೀ ರವಿಶಂಕರ್



ದಿನಾಂಕ 24/02/2022, ರಶ್ಯಾದಿಂದ ಯುಕ್ರೇನ್ ದೇಶದ ಮೇಲೆ ದಾಳಿ. ಸಾವಿರಾರು ವಿದೇಶೀಯರು ಪ್ರಾಣಾಪಾಯದಲ್ಲಿ. ದೇಶದ ಗಡಿಗಳತ್ತ ಲಕ್ಷಾಂತರ ನಿರಾಶ್ರಿತರ ವಲಸೆ. ಇಂತಹ ಸುದ್ದಿಗಳು ಭಾರತೀಯರನ್ನು ತಲುಪುವ ಮೊದಲೇ ಭಾರತದ ಸರ್ಕಾರೇತರ ಸಂಸ್ಥೆಯೊಂದು ತನ್ನನ್ನು ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿತ್ತು. ಅದು ಕೇವಲ ಒಂದೇ ವಾರದಲ್ಲಿ ಪೋಲೆಂಡ್, ಜರ್ಮನಿ, ಸ್ಲೋವಾಕಿಯಾ, ಹಂಗೆರಿ, ರೊಮಾನಿಯಾ, ಮೋಲ್ಡೋವಾ, ಸ್ವೀಡನ್ ಮುಂತಾದ ಒಂಭತ್ತು ದೇಶಗಳಲ್ಲಿ ನಿರಾಶ್ರಿತರ ಶಿಬಿರಗಳನ್ನು ಸ್ಥಾಪಿಸಿ 5000 ಜನರಿಗೆ ಆಶ್ರಯ ನೀಡಿದ್ದಲ್ಲದೆ ಸಂಕಷ್ಟದಲ್ಲಿದ್ದ ಯುಕ್ರೇನಿನ ಜನರಿಗೆ ಔಷಧಗಳು, ದಿನಬಳಕೆಯ ಸಾಮಗ್ರಿಗಳು ಮತ್ತು ದಿನಸಿ ಪದಾರ್ಥಗಳನ್ನು ಒದಗಿಸಿತು. ಯುಕ್ರೇನಿನಿಂದ ಭಾರತೀಯ ವಿದ್ಯಾರ್ಥಿಗಳ ರಕ್ಷಣಾ ಕಾರ್ಯದಲ್ಲಿಯೂ ಭಾರತೀಯ ಅಧಿಕಾರಿಗಳಿಗೆ ನೆರವು ನೀಡಿತು.

ಅದು ಶ್ರೀ ಶ್ರೀ ರವಿ ಶಂಕರ್ ಗುರುದೇವರು ಸ್ಥಾಪಿಸಿದ ಆರ್ಟ್ ಆಫ್ ಲಿವಿಂಗ್ ಸಂಸ್ಥೆ. ಇದರ ಕೇಂದ್ರ ಕಚೇರಿ ಬೆಂಗಳೂರಿನ ಕನಕಪುರ ರಸ್ತೆಯಲ್ಲಿದೆ. ಸ್ಥಾಪಕ ಗುರುದೇವ್ ರವಿ ಶಂಕರರೂ ಬೆಂಗಳೂರಿನವರು. ಅಪ್ಪಟ ಕನ್ನಡಿಗರು. ಶ್ರೀ ಶ್ರೀ ಎಂದೇ ಖ್ಯಾತರಾಗಿರುವ ರವಿ ಶಂಕರರು ಜನಿಸಿದ್ದು 1956ರ ಮೇ 13ರಂದು. ಅಂದು ಅಕ್ಷಯ ತದಿಗೆ. ಅದು ಶಂಕರಾಚಾರ್ಯರ ಜನ್ಮದಿನ. ಹೀಗಾಗಿ, ಅವರಿಗೆ ರವಿ ಶಂಕರ ಎಂಬ ಅಭಿದಾನವನ್ನು ಅವರ ತಂದೆತಾಯಿಯರಾದ ಶ್ರೀ ವೆಂಕಟರತ್ನಂ ಮತ್ತು ಶ್ರೀಮತಿ ವಿಶಾಲಾಕ್ಷಿಯವರು ನೀಡಿದರು. ತಂದೆ ಬೆಂಗಳೂರಿನಲ್ಲಿ ಆಟೋಮೊಬೈಲ್ ವ್ಯವಹಾರ ಮಾಡುತ್ತಿದ್ದರೂ ಶ್ರೀ ಶ್ರೀ ಜನಿಸಿದ್ದು ತಮಿಳುನಾಡಿನ ಪಾಪನಾಶಂ ಎಂಬ ಊರಿನಲ್ಲಿದ್ದ ತಾಯಿಯ ತವರುಮನೆಯಲ್ಲಿ. ಮುಂದೆ ಬೆಂಗಳೂರಿನಲ್ಲಿಯೇ ಬಾಲ್ಯವನ್ನು ಕಳೆದು ನಗರದ ಪ್ರತಿಷ್ಠಿತ ಸೇಂಟ್ ಜೋಸೆಫ್ ಕಾಲೇಜಿನಿಂದ ವಿಜ್ಞಾನದ ವಿಷಯದಲ್ಲಿ ಪದವೀಧರರಾದರು. ಅರಸಿಕೊಂಡು ಬಂದ ಬ್ಯಾಂಕ್ ಹುದ್ದೆಯನ್ನು ತ್ಯಜಿಸಿ ಆಧ್ಯಾತ್ಮದ ಸೆಳೆತಕ್ಕೊಳಗಾಗಿ, ಮಹರ್ಷಿ ಮಹೇಶ ಯೋಗಿಗಳ ಜೊತೆಗೂಡಿದರು. ಮುಂದಿನದು ಇತಿಹಾಸ!

ಕೇವಲ ನಾಲ್ಕು ವರ್ಷದವರಿದ್ದಾಗ ಭಗವದ್ಗೀತೆಯ ಶ್ಲೋಕಗಳನ್ನು ಸರಾಗವಾಗಿ, ನಿರರ್ಗಳವಾಗಿ ಪಠಿಸುತ್ತಿದ್ದ ಶ್ರೀಶ್ರೀಯವರು ತಮ್ಮ ಎಳೆಯ ವಯಸ್ಸಿನಲ್ಲಿಯೇ ಯೋಗ, ಆಯುರ್ವೇದ, ವೇದೋಪನಿಷತ್ತುಗಳಲ್ಲಿ ಪಾರಂಗತರಾಗಿದ್ದರು. ಸಹಜವಾಗಿಯೇ ಮಹರ್ಷಿ ಮಹೇಶ ಯೋಗಿಗಳ ಜೊತೆಗೂಡಿ ಅವರ ಧ್ಯಾನ ಕಾರ್ಯಕ್ರಮಗಳನ್ನು ಪರಿಚಯಿಸಲು ಜಗತ್ತಿನಾದ್ಯಂತ ಸಂಚರಿಸಿದರು.

ಆರ್ಟ್ ಆಫ್ ಲಿವಿಂಗ್ ಸಂಸ್ಥೆಯನ್ನು ಪ್ರಸ್ತಾಪಿಸದೆ ಶ್ರೀ ಶ್ರೀ ಯವರ ಜೀವನದ ಕುರಿತು ಬರೆಯುವುದು ಕಷ್ಟ. "ಆರ್ಟ್ ಆಫ್ ಲಿವಿಂಗ್" ಸಂಸ್ಥೆಯ ಸ್ಥಾಪನೆಯೂ ಒಂದು ರೋಚಕ ಕಥೆ. ಇದರ ಮಾತೃಸಂಸ್ಥೆ ವೇದವಿಜ್ಞಾನ ಮಹಾ ವಿದ್ಯಾಪೀಠ. ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗಲೇ ಶ್ರೀಶ್ರೀಯವರು ಮಹರ್ಷಿ ಮಹೇಶ್ ಯೋಗಿಯವರ ಸೆಳೆತಕ್ಕೆ ಒಳಗಾಗಿ ಅವರ ಸಂಸ್ಥೆಯ ಪರವಾಗಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದರು, ಪ್ರವಚನಗಳನ್ನು ನೀಡುತ್ತಿದ್ದರು ಹಾಗೂ ಧ್ಯಾನ ಶಿಬಿರಗಳನ್ನು ನಡೆಸುತ್ತಿದ್ದರು. ಮಹರ್ಷಿಯವರ ಅಪೇಕ್ಷೆಯ ಮೇರೆಗೆ ಬೆಂಗಳೂರಿನಲ್ಲಿ ಒಂದು ಗುರುಕುಲವನ್ನು ಸ್ಥಾಪಿಸಿ 160 ವಿದ್ಯಾರ್ಥಿಗಳಿಗಾಗಿ ವೇದಾಧ್ಯಯನದ ಅವಕಾಶ ಕಲ್ಪಿಸಿದರು. ಇದೊಂದು ವಸತಿಗುರುಕುಲವಾಗಿದ್ದು ಇಲ್ಲಿ ಎಲ್ಲವೂ ಉಚಿತವಾಗಿತ್ತು. ಆದರೆ ಅದೇಕೋ ಮಹರ್ಷಿಗಳು ಈ ಗುರುಕುಲವನ್ನು, ವಿದ್ಯಾರ್ಥಿಗಳನ್ನು ದೆಹಲಿಗೆ ವರ್ಗಾಯಿಸುವಂತೆ ಅಥವಾ ಮುಚ್ಚುವಂತೆ ಆದೇಶ ನೀಡಿದರು. 160 ವಿದ್ಯಾರ್ಥಿಗಳ ಭವಿಷ್ಯ ಡೋಲಾಯಮಾನವಾಗುತ್ತಿರುವುದನ್ನು ಕಂಡ, ಇನ್ನೂ 25 ವರ್ಷ ತುಂಬಿರದ ಶ್ರೀ ಶ್ರೀ ರವಿ ಶಂಕರರು ಬೆಂಗಳೂರಿಗೆ ಮರಳಿ ಆ ವಿದ್ಯಾರ್ಥಿಗಳ ಹೊಣೆಯನ್ನು ತಾವೇ ವಹಿಸಿಕೊಂಡರು. ಕೈಯಲ್ಲಿ ಕವಡೆ ಕಾಸಿರಲಿಲ್ಲ, ನೆಲೆಸಲು ನೆಲೆಯಿರಲಿಲ್ಲ. ಆದರೂ ದಾನಿಗಳ ಸಕಾಲಿಕ ನೆರವಿನಿಂದ ಗುರುಕುಲ ಮುಂದುವರೆಯಿತು. ಹೀಗೆ ಸ್ಥಾಪನೆಯಾದ ವೇದವಿಜ್ಞಾನ ಮಹಾ ವಿದ್ಯಾಪೀಠದ ಆಶ್ರಯದಲ್ಲಿ ಆರ್ಟ್ ಆಫ್ ಲಿವಿಂಗ್, ಅಂತಾರಾಷ್ಟ್ರೀಯ ಮಾನವೀಯ ಮೌಲ್ಯಗಳ ಸಂಸ್ಥೆ ಮುಂತಾದ ನೂರಾರು ಸಂಸ್ಥೆಗಳು ಬೆಳೆದವು. ಸಂಸ್ಥೆಯ ಚಟುವಟಿಕೆ 156ಕ್ಕೂ ಹೆಚ್ಚು ದೇಶಗಳಿಗೆ ವಿಸ್ತರಿಸಿತು.

**ಸುದರ್ಶನ ಕ್ರಿಯಾಯೋಗ ಮತ್ತು 5H ಕಾರ್ಯಕ್ರಮ**- ಮಹರ್ಷಿ ಮಹೇಶ ಯೋಗಿಗಳಿಂದ ದೂರವಾಗಿ ಬೆಂಗಳೂರಿಗೆ ಮರಳಿದ ಶ್ರೀ ಶ್ರೀ ರವಿ ಶಂಕರರು ಶಿವಮೊಗ್ಗ ಜಿಲ್ಲೆಯ ಭದ್ರಾ ನದಿಯ ದಂಡೆಯಲ್ಲಿ ಅಖಂಡ ಹತ್ತು ದಿನಗಳ ಮೌನ ವ್ರತವನ್ನಾಚರಿಸಿದಾಗ, ಸುದರ್ಶನ ಕ್ರಿಯಾಯೋಗದ ಅವಿರ್ಭಾವವೂ ಉಂಟಾಯಿತು. ಇದು "ಆರ್ಟ್ ಆಫ್ ಲಿವಿಂಗ್" ಸಂಸ್ಥೆಯ ಆಧಾರಭೂತ ಕಾರ್ಯಕ್ರಮವಾಯಿತು. ಇದು ನಡೆದದ್ದು 1982ರಲ್ಲಿ. ಅಂದಿನಿಂದ ಇಂದಿನವರೆಗೆ ಜಗತ್ತಿನಾದ್ಯಂತ 40 ಕೋಟಿಗೂ ಹೆಚ್ಚು ಜನರೊಂದಿಗೆ ಶ್ರೀಶ್ರೀಯವರು ಬೇರೆ ಬೇರೆ ಕಾರ್ಯಕ್ರಮಗಳ ಮೂಲಕ ಸಂಪರ್ಕವನ್ನು ಸಾಧಿಸಿದ್ದಾರೆ. ಇಂದು 192 ದೇಶಗಳಲ್ಲಿ ಅವರ ಶಿಷ್ಯರಿದ್ದಾರೆ.

5H (ಮನೆ, ಆರೋಗ್ಯ, ನೈರ್ಮಲ್ಯ, ಸಾಮರಸ್ಯ ಮತ್ತು ಮಾನವೀಯ ಮೌಲ್ಯಗಳು) ತತ್ತ್ವದ ನೆಲೆಯಲ್ಲಿ ಸಂಸ್ಥೆಯು ಜಗತ್ತಿನಾದ್ಯಂತ ಸೇವಾಕಾರ್ಯಗಳಲ್ಲಿ ನಿರತವಾಗಿದ್ದು ಸಮಾಜದ ಎಲ್ಲ ವರ್ಗದ, ವಯೋಮಾನದ ಜನರಿಗೆ ಒತ್ತಡರಹಿತ ಜೀವನ ನಡೆಸಲು, ಹೊಸ ದಾರಿ ಕಂಡುಕೊಳ್ಳಲು ನೆರವಾಗುವ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಅನೇಕ ಶಿಕ್ಷಣ ಸಂಸ್ಥೆಗಳ ಮೂಲಕ ಸಾವಿರಾರು ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುವುದರ ಜೊತೆಗೆ ಒಂದು ವಿಶ್ವವಿದ್ಯಾಲಯವೂ ಸೇರಿದಂತೆ ಅನೇಕ ಶೈಕ್ಷಣಿಕ ಸಂಸ್ಥೆಗಳು, ಆಸ್ಪತ್ರೆಗಳು, ಕೃಷಿ ಸಂಶೋಧನಾ ಕೇಂದ್ರಗಳು ಮುಂತಾದ ಅನೇಕ ಸಂಸ್ಥೆಗಳನ್ನು ಸ್ಥಾಪಿಸಿದೆ. ಲಕ್ಷಾಂತರ ಯುವಕರಿಗೆ ನಾಯಕತ್ವ ತರಬೇತಿ ಶಿಬಿರಗಳನ್ನು, ಕೌಶಲ್ಯ ತರಬೇತಿ ಶಿಬಿರಗಳನ್ನು ನಡೆಸಿದೆ. ಜಗತ್ತಿನಾದ್ಯಂತ ಲಕ್ಷಾಂತರ ಕೈದಿಗಳು ಈ ಸಂಸ್ಥೆಯ ಪುನರ್ವಸತಿ ಕಾರ್ಯಕ್ರಮದ ಫಲಾನುಭವಿಗಳಾಗಿದ್ದಾರೆ.

**ಸಂಧಾನ ಚತುರ ಶ್ರೀ ಶ್ರೀ**- ರಾಮಜನ್ಮಭೂಮಿ ವಿವಾದದ ವಿಷಯದಲ್ಲಿ ಶ್ರೀ ಶ್ರೀಯವರ ಸಂಧಾನ ಕೌಶಲ್ಯವನ್ನು ಭಾರತದ ಸರ್ವೋಚ್ಚ ನ್ಯಾಯಾಲಯವೇ ಗೌರವಿಸಿತ್ತು. ಕಾಶ್ಮೀರದ ಉಗ್ರವಾದಿಗಳನ್ನು, ಝಾರ್ಖಂಡ್ ಮತ್ತು ಕೇರಳದ ನಕ್ಸಲೀಯರನ್ನು, ಅಸ್ಸಾಮಿನ ತೀವ್ರಗಾಮಿಗಳನ್ನು ಮನವೊಲಿಕೆ ಮಾಡಿ ಸಮಾಜದ ಮುಖ್ಯಧಾರೆಗೆ ತಂದ ಕೀರ್ತಿ ಇವರದು. ಅಮೆರಿಕದ ದಾಳಿಗೆ ನಲುಗಿದ್ದ ಇರಾಕಿನ ಅತ್ಯಂತ ಅಪಾಯಕಾರಿ ಕೆಂಪು ವಲಯಗಳಲ್ಲಿಯೂ ಸಂಚರಿಸಿ ಶಾಂತಿಯ ಸಂದೇಶವನ್ನು ನೀಡಿದರು. ಇರಾಕಿನ ಜನತೆಗೆ ಮಾನಸಿಕ ಆಘಾತದಿಂದ ಹೊರ ಬರಲು ನೆರವು ನೀಡಿದಂತೆಯೇ, ದೀರ್ಘ ಕಾಲದಿಂದ ಕುಟುಂಬದಿಂದ, ದೇಶದಿಂದ ದೂರವಾಗಿ, ಯುದ್ಧ ಭೂಮಿಯಲ್ಲಿ ಜೀವನವನ್ನು ಕಳೆದ ಅಮೆರಿಕನ್ ಯೋಧರಿಗೂ ಶಮನಕಾರಿ ತಂತ್ರಗಳನ್ನು ಹೇಳಿಕೊಟ್ಟರು. ಐಸಿಸ್ ಉಗ್ರಗಾಮಿಗಳು ಯಾಜಿಡಿ ಜನಾಂಗದವರನ್ನು ಅಮಾನುಷವಾಗಿ ದಮನಿಸುತ್ತಿದ್ದಾಗ, ಅವರ ನೆರವಿಗೆ ನಿಂತರು. ಸರ್ಬಿಯಾ ದೇಶವು ಅಂತಃಕಲಹದಿಂದ ಜರ್ಝರಿತವಾಗಿದ್ದಾಗ, ಅಲ್ಲಿನ ಜನರಿಗೆ ಉಂಟಾದ ಮಾನಸಿಕ ಆಘಾತಗಳನ್ನು ಎದುರಿಸಲು ಶಿಬಿರಗಳನ್ನು ನಡೆಸಿದರು.

ಅದೇರೀತಿ, ಕೊಲಂಬಿಯಾದ ಕ್ರಾಂತಿಕಾರಿ ಸಶಸ್ತ್ರ ಪಡೆ ಎಂಬ ಹೆಸರಿನ ತೀವ್ರಗಾಮಿಗಳ ಗುಂಪು ಮತ್ತು ಕೊಲಂಬಿಯನ್ ಸರಕಾರಗಳ ನಡುವೆ ಶ್ರೀಶ್ರೀಯವರು ನೇರ ಸಂಧಾನವನ್ನು ನಡೆಸಿ 2016ರಲ್ಲಿ ಒಂದು ಹೊಸ ಶಾಂತಿ ಒಪ್ಪಂದಕ್ಕೆ ಉಭಯ ಪಕ್ಷಗಳೂ ಸಹಿ ಹಾಕುವಂತೆ ಮಾಡುವಲ್ಲಿ ಯಶಸ್ವಿಯಾದರು. ಇದರಿಂದಾಗಿ 2,60,000ಕ್ಕೂ ಹೆಚ್ಚು ಜೀವಗಳನ್ನು ಬಲಿ ತೆಗೆದುಕೊಂಡ, ಲಕ್ಷಗಟ್ಟಲೆ ಜನರನ್ನು ನೆಲೆ ತಪ್ಪಿಸಿದ ಐದು ದಶಕಗಳ ಅಂತಃಕಲಹ ಕೊನೆ ಕಂಡಿತು.

ಜಗತ್ತಿನಾದ್ಯಂತ ಅನೇಕ ಗೌರವ ಸನ್ಮಾನಗಳು ಅವರನ್ನು ಅರಸಿ ಬಂದಿವೆ. ಭಾರತದ ಎರಡನೆಯ ಅತ್ಯುನ್ನತ ನಾಗರಿಕ ಸನ್ಮಾನವಾದ ಪದ್ಮವಿಭೂಷಣ ಪ್ರಶಸ್ತಿ ಅವರ ಸೇವೆಗೆ ಸಂದಿದೆ. ಜಗತ್ತಿನಾದ್ಯಂತ ಹಲವಾರು ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡಿ ಅವರನ್ನು ಸನ್ಮಾನಿಸಿವೆ. ಪರಾಗ್ವೆ, ಮಂಗೋಲಿಯಾ ಮತ್ತು ಕೊಲಂಬಿಯಾ ದೇಶಗಳ ಅತ್ಯುನ್ನತ ನಾಗರಿಕ ಪ್ರಶಸ್ತಿಗಳು ಇವರಿಗೆ ಲಭ್ಯವಾಗಿವೆ. ಅಮೆರಿಕದ 25ಕ್ಕೂ ಹೆಚ್ಚು ರಾಜ್ಯಗಳು ರವಿಶಂಕರ್ ದಿನವನ್ನು ಘೋಷಣೆ ಮಾಡಿವೆ. ಇಷ್ಟೆಲ್ಲ ಸಾಧನೆ ಮಾಡಿದ ಶ್ರೀಶ್ರೀಯವರಿಗೆ ವರ್ಷದ ಕನ್ನಡಿಗ ಪ್ರಶಸ್ತಿಯೂ ಲಭ್ಯವಾಗಿದೆ.

ಬಾಲ್ಯದಲ್ಲಿ ಗೋಪಾಲಕೃಷ್ಣ ಅಡಿಗರಿಂದ ಪ್ರಭಾವಿತರಾಗಿದ್ದ ಶ್ರೀ ಶ್ರೀ ಕನ್ನಡದ ನವ್ಯಶೈಲಿಯಲ್ಲಿ ಅನೇಕ ಕವನಗಳನ್ನೂ ರಚಿಸಿದ್ದಾರೆ. ಬಹುಭಾಷಾ ಕೋವಿದರಾಗಿದ್ದ ಅವರು ಆಧ್ಯಾತ್ಮ ಜ್ಞಾನದ ಕುರಿತು ನೀಡಿದ ಪ್ರವಚನಗಳು ಪ್ರಪಂಚದ ಅನೇಕ ಭಾಷೆಗಳಲ್ಲಿ ಪುಸ್ತಕರೂಪದಲ್ಲಿ ಪ್ರಕಟವಾಗಿವೆ.

-ಕೆ. ಜನಾರ್ದನ ತುಂಗ



**ಚುನಾವಣಾ ಪ್ರಚಾರ ಸಭೆಯಲ್ಲಿ ಮೋದಿಯವರೊಡನೆ ಬಿಜೆಪಿಯ ರಾಜ್ಯ ಉಪಾಧ್ಯಕ್ಷರಾದ ತೇಜಸ್ವಿನಿ ಅನಂತಕುಮಾರ್**

ಇತ್ತೀಚೆಗೆ ನಡೆದ ಕರ್ನಾಟಕ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಬಿಜೆಪಿ ಚುನಾವಣಾ ಪ್ರಣಾಳಿಕೆ ಸಮಿತಿ ಹಾಗೂ ಚುನಾವಣಾ ನಿರ್ವಹಣಾ ಸಮಿತಿಯ ಸದಸ್ಯರಾಗಿ ವಿಧಾನಸಭಾ ಚುನಾವಣೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಬಾಗಲಕೋಟೆ ಜಿಲ್ಲೆಯ ಬಾದಾಮಿಯಲ್ಲಿ ಬಿಜೆಪಿ ಅಭ್ಯರ್ಥಿ ಶ್ರೀ ಶಾಂತಗೌಡ ಪಾಟೀಲರ ಪರ ಪ್ರಧಾನಿ ನರೇಂದ್ರ ಮೋದಿಯವರು ಭಾಗವಹಿಸಿದ್ದ ಚುನಾವಣಾ ಪ್ರಚಾರ ಸಭೆಯಲ್ಲಿ ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ, ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಅದಮ್ಯಚೇತನ ತಿಂಗಳ ವರದಿ (15 ಏಪ್ರಿಲ್ 2023 ರಿಂದ 15 ಮೇ 2023)

### ಗಣ್ಯರ ಭೇಟಿ

ಮಹಾರಾಷ್ಟ್ರ ಬಿಜೆಪಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಂಜಯ್ ಉಪಾಧ್ಯಾಯ, ಮುಂಬೈಯ ಬಿಜೆಪಿ ಕಾರ್ಯದರ್ಶಿ ಶ್ರೀ ರಾಜೇಶ್ ರಾಮಪ್ರಸಾದ್ ಸಿಂಗ್, ಮುಂಬೈ ಬಿಜೆಪಿ ವಕ್ತಾರರಾದ ಶ್ರೀ ನಿರಂಜನ್ ಶೆಟ್ಟಿ, ಶ್ರೀ ದೀಪೇಶ್ ಸಾವಂತ್, ಶ್ರೀ ಸುಂದರ್ ಎಸ್. ಎ. ಮುಂತಾದವರು ಅದಮ್ಯಚೇತನ ಹಾಗೂ ಅನಂತ ಪ್ರೇರಣಾ ಕೇಂದ್ರಗಳಿಗೆ ಭೇಟಿ ನೀಡಿದ್ದರು. ಗುಜರಾತ್ ರಾಜ್ಯದ ಎಂಎಲ್ಎ ಶ್ರೀ ಹಿತೇಶ್ ಹಿಮ್ಮತ್‌ಲಾಲ್ ಖಂಡೋರ್ ಮುಂತಾದ ಗಣ್ಯರು ಅದಮ್ಯಚೇತನದ ಶೂನ್ಯತ್ಯಾಜ್ಯ ಅಡುಗೆ ಮನೆಗೆ ಭೇಟಿನೀಡಿ ಪ್ರಶಂಸೆ ವ್ಯಕ್ತಪಡಿಸಿದರು.

### "ಶೂನ್ಯತ್ಯಾಜ್ಯದ ಅಡುಗೆ ಮನೆಯೆಂಬ ಆದರ್ಶಪರಿಕಲ್ಪನೆ"

-ಹೆಚ್. ಎಸ್. ವೆಂಕಟೇಶಮೂರ್ತಿ

ರಾಜಾಜಿನಗರದ ಕಂಪೋಸ್ಟರ್ಸ್ ಗ್ರೂಪ್ ಸಂಸ್ಥೆಯು ಅದಮ್ಯ ಚೇತನದಲ್ಲಿ ಆಯೋಜನೆ ಮಾಡಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಹಿರಿಯ ಸಾಹಿತಿ ಶ್ರೀ ಎಚ್.ಎಸ್. ವೆಂಕಟೇಶಮೂರ್ತಿಯವರು, ಬಹುದಿನಗಳಿಂದ ಅದಮ್ಯಚೇತನ ನೋಡಬೇಕೆಂಬ ಆಸೆ ಈ ದಿನ ಪೂರೈಸಿತು, ಅದಮ್ಯ ಚೇತನದ ಶೂನ್ಯ ತ್ಯಾಜ್ಯ ಅಡುಗೆ ಪರಿಕಲ್ಪನೆ ಸೊಗಸಾಗಿದೆ. ಇಲ್ಲಿಂದ ತಿಳಿದುಕೊಳ್ಳುವ ವಿಷಯವೂ ಸಹ ತುಂಬ ಇದೆ ಎಂದರು. ತೋಟಗಾರಿಕೆ ಇಲಾಖೆ ನಿವೃತ್ತ ನಿರ್ದೇಶಕರಾದ ಶ್ರೀ ಬಿಎಂಎಸ್ ಮೂರ್ತಿಯವರು ಮಾತನಾಡಿ, ನಗರದ ಪ್ರದೇಶದ ಮಕ್ಕಳಿಗೆ ಗಿಡ ಮರಗಳ ಪರಿಯಚವಿಲ್ಲ. ತರಕಾರಿ ಹಣ್ಣುಗಳನ್ನು ಯಾವ ರೀತಿ ಬೆಳೆಯುತ್ತಾರೆ ಎಂಬ ವಿಚಾರವೂ ತಿಳಿದಿಲ್ಲ. ಅಂತಹ ಮಕ್ಕಳಿಗೆ ತಾರಸಿತೋಟಗಳು ಉಪಯುಕ್ತವಾಗುತ್ತಿವೆ ಎಂದರು. ಇದೇ ಸಂದರ್ಭದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮಾತನಾಡಿ, ಬೆಂಗಳೂರು ಮಹಾನಗರದಲ್ಲಿ ಕಳೆದ 30-35 ವರ್ಷಗಳಿಂದ ಕಸದ ವಿರುದ್ಧ ಹೋರಾಟ ಮಾಡುತ್ತಿದ್ದೇವೆ. ನಗರಾಭಿವೃದ್ಧಿಯ ಪ್ರಜ್ಞೆಯಿಲ್ಲದೆ ಪರಿಸರ ಹಾಳು ಮಾಡುತ್ತಿದ್ದೇವೆ. ಪರಿಸರ ಸಂರಕ್ಷಣೆ ನಮ್ಮ ಅಡುಗೆ ಮನೆಯಿಂದಲೇ ಪ್ರಾರಂಭವಾಗಬೇಕಿದೆ. ಈ ನಿಟ್ಟಿನಲ್ಲಿ 2003ರಲ್ಲಿ ಪ್ರಾರಂಭವಾದ ನಮ್ಮ ಅಡುಗೆಯು ಪಳೆಯುಳಿಕೆ ಇಂಧನರಹಿತ, ಶೂನ್ಯತ್ಯಾಜ್ಯ ಪರಿಕಲ್ಪನೆಯಿಂದ ಕಾರ್ಯ ನಿರ್ವಹಿಸುತ್ತಿದೆ ಎಂದರು.

### ದೇಗುಲ ದರ್ಶನ ಮಾಲಿಕೆ

ಪ್ರತಿತಿಂಗಳ 3ನೇ ಶುಕ್ರವಾರ ಯೂಟ್ಯೂಬ್ ಮೂಲಕ ಪ್ರಸಾರವಾಗುವ ದೇಗುಲ ದರ್ಶನ ಮಾಲಿಕೆಯ 22ನೇ ಕಾರ್ಯಕ್ರಮದಲ್ಲಿ ಈ ತಿಂಗಳು ಉಡುಪಿ ಜಿಲ್ಲೆಯ ಕೆಲವು ಪುರಾತನ ದೇವಾಲಯಗಳನ್ನು ಪರಿಚಯಿಸಲಾಯಿತು.

### ಶ್ರದ್ಧೆಯ ಶಿಲ್ಪ

ಅದಮ್ಯ ಚೇತನದ ಪ್ರಾಯೋಜಿಸುವ ಶ್ರದ್ಧೆಯ ಶಿಲ್ಪ ಬಾನುಲಿ ಕಾರ್ಯಕ್ರಮ ಸರಣಿ ಪ್ರತಿ ಮಂಗಳವಾರ ಮುಂಜಾನೆ 6.35ಕ್ಕೆ ಮತ್ತು ಸಂಜೆ 6.10ಕ್ಕೆ ಮೈಸೂರು ಆಕಾಶವಾಣಿಯಿಂದ ಬಿತ್ತರಗೊಳ್ಳುತ್ತದೆ. ಇದರಲ್ಲಿ ಕರ್ನಾಟಕದ ಹಲವು ಪುರಾತನ ದೇವಾಲಯಗಳನ್ನು ಪರಿಚಯಿಸಲಾಗುತ್ತಿದೆ.

### ಶ್ರೀಚೇತನ ಸಭೆ

ಎಂದಿನಂತೆ ಶ್ರೀಚೇತನ ಸಭೆಯನ್ನು ಆನ್ ಲೈನ್ ಮೂಲಕ ನಡೆಸಲಾಗುತ್ತಿದೆ. ಪ್ರತಿ ಮಂಗಳವಾರ ಮಧ್ಯಾಹ್ನ 12ಕ್ಕೆ ಪ್ರಾರ್ಥನೆಯಿಂದ ಪ್ರಾರಂಭವಾಗಿ 1.30ವರೆಗೆ ನಡೆಯುವ ಸಭೆಗಳಲ್ಲಿ ಪ್ರಾರ್ಥನೆ, ಭಗವದ್ಗೀತೆ ಶ್ಲೋಕ ಪಠಣ, ಕವಿನಮನ, ಗಿಡ-ಮರಗಳ ಪರಿಚಯ, ಆರೋಗ್ಯ, ಅಡುಗೆ ಸೇರಿದಂತೆ ಅನೇಕ ಕಾರ್ಯಕ್ರಮಗಳು ಜರುಗುತ್ತವೆ.

### ಭಗವದ್ಗೀತೆ ಪಠಣ

ಪ್ರತಿ ಗುರುವಾರ ಸಂಜೆ 4ರಿಂದ 5ರ ವರೆಗೆ ಅದಮ್ಯ ಚೇತನದ ಆವರಣದಲ್ಲಿ ನಡೆಸಲಾಗುತ್ತಿರುವ ಗೀತಾಪಠಣ ಕಾರ್ಯಕ್ರಮದಲ್ಲಿ ಅದಮ್ಯ ಚೇತನದ ಕಾರ್ಯಕರ್ತರು, ಸಿಬ್ಬಂದಿಗಳು ಮತ್ತು ಇತರರು ಭಾಗವಹಿಸುತ್ತಿದ್ದಾರೆ.

### ಪ್ಲೇಟ್ ಬ್ಯಾಂಕ್

ಬೆಂಗಳೂರಿನ ವಿವಿಧೆಡೆ ನಡೆಯುವ ಕಾರ್ಯಕ್ರಮಗಳಲ್ಲಿ ಅದಮ್ಯ ಚೇತನದ ತಟ್ಟೆ ಮತ್ತು ಲೋಟಗಳು ಬಳಕೆಯಾಗುತ್ತಿವೆ. ಏಪ್ರಿಲ್ ತಿಂಗಳಲ್ಲಿ 15 ಖಾಸಗೀ ಕಾರ್ಯಕ್ರಮಗಳಿಗೆ 4240 ನೀರಿನ ಲೋಟ, 2195 ತಟ್ಟೆ, 1745 ಲೋಟ, 1125 ಬಟ್ಟಲು, 1845 ಚಮಚಗಳನ್ನು ಸಾರ್ವಜನಿಕರು ಪಡೆದು ತಮ್ಮ ಪರಿಸರ ಕಾಳಜಿಯನ್ನು ಕಾರ್ಯರೂಪಕ್ಕೆ ತಂದರು.



**ಕರ್ನಾಟಕ ಜ್ಞಾನ ಆಯೋಗ ಸದಸ್ಯ ಹಾಗೂ ಐಐಟಿ ಮಾಜಿ ನಿರ್ದೇಶಕ ಪ್ರೊ. ಸಡಗೋಪನ್ ಅವರು ಅದಮ್ಯ ಚೇತನಕ್ಕೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಮೈಡ್ ಮ್ಯಾಟ್ರಿಕ್ಸ್ ಸಂಸ್ಥೆಯ ಸಂಸ್ಥಾಪಕ ನಿರ್ದೇಶಕ ಸುಜಿತ್ ಕುಮಾರ್ ಅವರು ಉಪಸ್ಥಿತರಿದ್ದರು.**

## ಮುಂದುವರೆದ ನಿತ್ಯ ಅನ್ನದಾನ

| ಕ್ರ. ಸಂ | ನಿತ್ಯ ಅನ್ನದಾನದ ಕೇಂದ್ರ/ ಊಟದ ಸಮಯ |
|---|---|
| 1 | ಅದಮ್ಯ ಚೇತನ ಕೆಂಪೇಗೌಡ ನಗರ, ಗವಿಪುರ 2.00 ರಿಂದ 3.00 |
| 2 | ಜಯನಗರ 4ನೇ ಹಂತ, ಕನ್ನಡ ಕಟ್ಟೆ ಜೈನ್ ಟೆಂಪಲ್ ಮುಂಭಾಗ 12.30 ರಿಂದ 1.30 |
| 3 | ನಗರ್ತಪೇಟೆ ಮುಖ್ಯರಸ್ತೆಯ ನಗರೇಶ್ವರ ದೇವಸ್ಥಾನ 12.30 ರಿಂದ 1.30 |
| 4 | ಶ್ರೀ ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಟ್ಯಾಂಕ್ ಬಂಡ್ ರಸ್ತೆ ಹಲಸೂರು ಕೆರೆ ಪಕ್ಕ ಬೆಂಗಳೂರು 12.30 ರಿಂದ 1.30 |
| 5 | ಅನಂತ ಪ್ರೇರಣಾ ಕೇಂದ್ರ, ಸೌತ್ ಎಂಡ್ ವೃತ್ತ 12.45 ರಿಂದ 2.00 (ಕಾಲೇಜು ವಿದ್ಯಾರ್ಥಿಗಳಿಗೆ ಮಾತ್ರ) |

## ಅದಮ್ಯ ಸೇವಾ

( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಮಹಾರಾಷ್ಟ್ರ ಬಿಜೆಪಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಂಜಯ್ ಉಪಾಧ್ಯಾಯ ಅನಂತ ಪ್ರೇರಣಾ ಕೇಂದ್ರದ ಫೋಟೋ ಗ್ಯಾಲರಿಯನ್ನು ವೀಕ್ಷಣೆ ಮಾಡಿದರು. ಈ ಸಂದರ್ಭದಲ್ಲಿ ಶ್ರೀ ಜಿ.ಎಂ. ಇನಾಂದಾರ್, ಅನಂತಪಥ ಸಂಪಾದಕರಾದ ಶ್ರೀ ಟಿ.ಎಸ್. ಗೋಪಾಲ್ ಜೊತೆಯಲ್ಲಿದ್ದರು.



ಮುಂಬೈಯ ಬಿಜೆಪಿ ಕಾರ್ಯದರ್ಶಿ ಶ್ರೀ ರಾಜೇಶ್ ರಾಮಪ್ರಸಾದ್ ಸಿಂಗ್, ಮುಂಬೈ ಬಿಜೆಪಿ ವಕ್ತಾರರಾದ ಶ್ರೀ ನಿರಂಜನ್ ಶೆಟ್ಟಿ, ಶ್ರೀ ದೀಪೇಶ್ ಸಾವಂತ್, ಶ್ರೀ ಸುಂದರ್ ಎಸ್. ಎ. ಅನಂತ ಪ್ರೇರಣಾ ಕೇಂದ್ರದ ಫೋಟೋ ಗ್ಯಾಲರಿ ವೀಕ್ಷಣೆ ಮಾಡಿದರು.




ಕೆಂಪೇಗೌಡ ನಗರದ ಸಂರಕ್ಷಾ ತಲಸ್ಸೆಮಿಯ ಆರೈಕೆ ಕೇಂದ್ರದಲ್ಲಿ ಆಯೋಜಿಸಿದ ವಿಶ್ವ ತಲಸ್ಸೆಮಿಯ ದಿನದಲ್ಲಿ ಭಾಗಿಯಾದ ಸಂದರ್ಭ.



ಅದಮ್ಯ ಚೇತನ ಸಂಸ್ಥೆಗೆ ಗುಜರಾತಿನ ಭುಜ್ ತಾಲೂಕಿನ ಎಂಎಲ್ಎ, ಶ್ರೀ ಹಿತೇಶ್ ಹಿಮ್ಮತ್‌ಲಾಲ್ ಖಂಡೋರ್ ಅವರು ಭೇಟಿ ನೀಡಿದ ಸಂದರ್ಭದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅಲ್ಲಿನ ಕಾರ್ಯವೈಖರಿಯ ಬಗ್ಗೆ ಮಾಹಿತಿ ನೀಡಿದರು.




ಅದಮ್ಯ ಚೇತನದಲ್ಲಿ ಪ್ರತಿ ಗುರುವಾರ ನಡೆಯುವ ಭಗವದ್ಗೀತೆ ಶ್ಲೋಕ ಪಠಣದ ಸಂದರ್ಭದ ಚಿತ್ರ



ಅದಮ್ಯ ಚೇತನದ ಅಡುಗೆ ಮನೆಯ ಬಗ್ಗೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಹಿರಿಯ ಸಾಹಿತಿ ಶ್ರೀ ಎಚ್.ಎಸ್. ವೆಂಕಟೇಶಮೂರ್ತಿಯವರಿಗೆ ಮಾಹಿತಿ ನೀಡುತ್ತಿರುವುದು.



ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಜಿಇಎಫ್ ಬಯೋ-ಪಾರ್ಕ್ ಆವರಣದಲ್ಲಿ ಆಯೋಜನೆ ಮಾಡಿದ 384ನೇ ಹಸಿರು ಭಾನುವಾರವು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ನೇತೃತ್ವದಲ್ಲಿ ನಡೆಯಿತು.



ಅದಮ್ಯ ಚೇತನದ ತರಕಾರಿ ಹೆಚ್ಚುವ ಕರಸೇವೆಯಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಹಾಗೂ ಬಿಎಂಎಸ್ ಕಾಲೇಜಿನ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಪಾಲ್ಗೊಂಡ ಸಂದರ್ಭ

## ಅನಂತ ಚಿತ್ರಸಂಪುಟ

ಅನಂತಕುಮಾರರು 2018ರ ವಿಧಾನ ಸಭಾ ಚುನಾವಣೆಯಲ್ಲಿ ರಾಜ್ಯದಾದ್ಯಂತ ಪ್ರವಾಸ ಕೈಗೊಂಡು ಅತ್ಯುತ್ಸಾಹದಿಂದ ಪ್ರಚಾರ ನಡೆಸಿ ಭಾರತೀಯ ಜನತಾ ಪಕ್ಷವು ಅತಿದೊಡ್ಡ ಪಕ್ಷವಾಗಿ ಹೊಮ್ಮುವಂತೆ ಮಾಡಿದರು.














